ಆಶ್ವಾಸನೆಯನ್ನು ಮಾನ್ಯ ಮುಖ್ಯ ಮಂತ್ರಿಗಳು ಅದನ್ನು ಎತ್ತಿ ಹಿಡಿಯತಕ್ಕಂಥಾ ಕೆಲಸ ಮಾಡಲಿಲ್ಲ. ಈ ಸ್ಕೇರ್ಸಿಟ್ ಕಂಡೀಷನ್ಸ್ ಬಗ್ಗೆ complete powers have been given to Sri Shivanna and Sri Devendrappa Ghalappa ಎಂದು ಕ್ಯಾಬಿನೆಟ್ ಡಿಸಿಷನ್ ಇದೆ. ನೀವು ಪತ್ರಿಕೆಯಲ್ಲಿ ಕೊಟ್ಟಂಥ ಹೇಳಿಕೆ ಕ್ಯಾಬಿನೆಟ್ ಡಿಸಿಷನ್‌ಗೆ ವಿರುದ್ಧವಾಗಿದೆ. ಮಾನ್ಯ ಶಿವಣ್ಣನವರು ಅಲ್ಲಿಯ ಹುಡುಗರ ಕಷ್ಟ ನೋಡಿ, ಜನರ ಕಷ್ಟ ನೋಡಿ ಕೊಟ್ಟಂಥ ಹೇಳಿಕೆಯನ್ನು ಮಾನ್ಯ ಮುಖ್ಯ ಮಂತ್ರಿಗಳು ಎತ್ತಿ ಹಿಡಿಯಲಿಲ್ಲಾ ಎಂದು ನಾನು ಮತ್ತೊಮ್ಮೆ ಹೇಳುತ್ತೇನೆ. ಈ ವಿಚಾರದಲ್ಲಿ ಮೈಸೂರು ರಾಜ್ಯದಲ್ಲಿ ನಮ್ಮ ಭಾಗದ ಪ್ರತಿನಿಧಿಗಳು ಯಾರೂ ಇಲ್ಲ ಎಂದು ನಾನು ವ್ಯಥೆಯಿಂದ ಹೇಳಬೇಕಾಗಿದೆ. ಹೈದ್ರಾಬಾದ್ ಕರ್ನಾಟಕದಲ್ಲಿ ಇಂತಹ ಒಂದು ದುರ್ಘಟನೆ ಮಂತ್ರಿಮಂಡಲದ ತಪ್ಪಿನಿಂದ ನಡೆದಿದೆ ಎಂದು ನಾನು ಹೇಳುತ್ತೇನೆ. ಇದು ಹುಡುಗರು ಮಾಡಿದ ತಪ್ಪಲ್ಲ. ಈ ದುರ್ಘಟನೆ ರಿಸರ್ವ್ ಪೋಲೀಸಿನವರಿಂದ ನಡೆದಿದೆ. ರಾಜ್ಯ ಸಚಿವರಾದ ಶ್ರೀ ಶಿವಣ್ಣನವರು ಕೊಟ್ಟಂಥ ಆಶ್ವಾಸನೆಯನ್ನು ತಿಳಿಸಲು ಹುಡುಗರು ಶಾಂತರೀತಿಯಲ್ಲೇ ಏರ್‌ಪೋರ್ಟ್ ಹೌಸ್‌ನಲ್ಲಿದ್ದ ಶ್ರೀ ಕೆ. ಹೆಚ್. ಪಾಟೀಲರನ್ನು ಕಾಣಲು ಹೋದರು. ಅಲ್ಲಿಂದ ಬರುವ ಕಾಲಕ್ಕೆ ಸಂಪೂರ್ಣವಾಗಿ ಲಾಠಿ ಛಾರ್ಜ್ ಶುರುವಾಯಿತು. ಆ ಹುಡುಗರು ಶಾಂತ ರೀತಿಯಲ್ಲೇ ಇದ್ದರೂ ಕೂಡ ರಿಸರ್ವ್ ಪೋಲೀಸಿನವರು ಅವರನ್ನು ಹೊಡೆದಿದ್ದಾರೆ, ಒದ್ದಿದ್ದಾರೆ, ಥಳಿಸಿದ್ದಾರೆ. ಸುಮಾರು ನೂರು ಹುಡುಗರಿಗೆ ಏಟು ಬಿದ್ದಿದೆ. ಏರ್‌ಪೋರ್ಟ್ ಹೌಸ್ ಪಕ್ಕದಲ್ಲಿ ಶ್ರೀ ನೀಲಕಂಠರಾವ್ ಅವರ ಮನೆ ಇದೆ. ಈ ಲಾಠಿ ಛಾರ್ಜ್ ಶುರುವಾದಾಗ ಹುಡುಗರು ಅವರ ಮನೆಗೆ ನುಗ್ಗಿದರು. ಆ ಪೋಲೀಸಿನವರು ಅವರ ಮನೆಗೂ ನುಗ್ಗಿ ಆ ಹುಡುಗರನ್ನು ಹೊಡೆದಿದ್ದಾರೆ. ಹೆಂಗಸರು ಇರತಕ್ಕಂಥ ಮನೆಗೆ ಪೋಲೀಸರು ಪ್ರವೇಶ ಮಾಡುವುದು ಉಚಿತವಲ್ಲ. ಅವರ ಮನೆಗೆ ನುಗ್ಗಿ ಸಿಕ್ಕಾಪಟ್ಟೆ ಲಾಠಿ ಛಾರ್ಜ್ ಮಾಡಿದ್ದರಿಂದ ಒಬ್ಬ ಹುಡುಗ ರಕ್ತವಾಂತಿ ಮಾಡಿಕೊಂಡಿದ್ದಾನೆ. ಇಂಥಾ ಪರಿಸ್ಥಿತಿಯನ್ನು ಸರ್ಕಾರ ಮನಸ್ಸು ಮಾಡಿದ್ದರೆ ತಪ್ಪಿಸ ಬಹುದಾಗಿತ್ತು. ಹೇಗೆಂದರೆ ರಾಜ್ಯ ಸಚಿವರಾದ ಶ್ರೀ ಶಿವಣ್ಣನವರು ಆ ಭಾಗದ ವಿದ್ಯಾರ್ಥಿ ಗಳಿಗೆ ಏನು ಒಂದು ಆಶ್ವಾಸನೆಯನ್ನು ಕೊಟ್ಟಿದ್ದರೋ ಅದನ್ನು ಸಮರ್ಥನೆ ಮಾಡತಕ್ಕಂಥ ಕಾರ್ಯವನ್ನು ಶ್ರೀಮಾನ್ ದೇವರಾಜ್ ಅರಸ್‌ರವರು ಈಡೇರಿಸಿ ಕೊಟ್ಟಿದ್ದರೆ ಅಲ್ಲಿ ಇಂತಹ ದುರ್ಘಟನೆ ನಡೆಯುತ್ತಾ ಇರಲಿಲ್ಲ. ಶ್ರೀ ಕೆ. ಹೆಚ್. ಪಾಟೀಲರು ಮತ್ತು ಶ್ರೀ ಶಿವಣ್ಣನವರು ಕೂಡ ಹೇಳಿದ್ದಾರೆ ನಾನು ಹೇಳುವುದು ಮೈಸೂರು ರಾಜ್ಯದಲ್ಲಿರುವ ರಾಯಚೂರು, ಗುಲ್ಬರ್ಗ ಮತ್ತು ಬೀದರ್ ಜಿಲ್ಲೆಯ ಜನಗಳಿಗೆ ರಕ್ಷಣೆ ಕೊಡತಕ್ಕಂಥ ಯಾವ ವ್ಯಕ್ತಿಯೂ ಆ ಭಾಗಕ್ಕೆ ಇಲ್ಲ ಎಂದು ಹೇಳಬೇಕಾಗಿದೆ. ಆದುದರಿಂದ ಇದರ ಬಗ್ಗೆ ಜುಡಿಷಿಯಲ್ ಎನ್‌ಕ್ವೈರಿ ಆಗಬೇಕು ಎಂದು ಹೇಳುತ್ತೇನೆ. ಈ ದುರ್ಘಟನೆ ಸರ್ಕಾರದ ತಪ್ಪಿನಿಂದ ನಡೆದಿರಲಿ ಅಥವಾ ಹುಡುಗರ ತಪ್ಪಿನಿಂದರೇ ನಡೆದಿರಲಿ ಇವರ ಬಗ್ಗೆ ಜುಡಿಷಿಯಲ್ ಎನ್‌ಕ್ವೈರಿ ಆಗಬೇಕು. ಇದು ಆಗದೇ ಹೋದರೆ ಅನ್ಯಾಯ ಮಾಡಿದಂತಾಗುತ್ತದೆ. ಸರ್ಕಾರ ಇದನ್ನು ಜುಡಿಷಿಯಲ್ ಎನ್‌ಕ್ವೈರಿಗೆ ಹಾಕಿದರೆ ಜನರಿಗೆ ತಮ್ಮಲ್ಲಿ ವಿಶ್ವಾಸ ಬರುತ್ತದೆ ಎಂದು ತಮ್ಮ ಮುಖಾಂತರ ವಿನಂತಿ ಮಾಡಿ ಕೊಳ್ಳುತ್ತೇನೆ. ಇದರ ಬಗ್ಗೆ ಜುಡಿಷಿಯಲ್ ಎನ್‌ಕ್ವೈರಿ ಆಗಿ ತಪ್ಪು ಯಾರಿಂದ ಆಗಿದೆ ಎನ್ನುವುದನ್ನು ಸಿದ್ಧ ಮಾಡಲೇಬೇಕು ಎಂದು ಮತ್ತೊಮ್ಮೆ ಹೇಳುತ್ತೇನೆ. ಈಗಲಾದರೂ ಕೂಡ ಸರ್ಕಾರದವರು ಕಣ್ಣು ತೆರೆದು ಆ ಭಾಗದಲ್ಲಿನ ಜನ, ವಿದ್ಯಾರ್ಥಿಗಳ ತಂದೆತಾಯಿಗಳು ಪಡತಕ್ಕ ಗೋಳನ್ನು ತಿಳಿದುಕೊಂಡು ಸರ್ಕಾರ ವಿನಾಯಿತಿ ಕೊಡಬೇಕು. ಅವರು ಗುಲ್ಬರ್ಗಾದಲ್ಲಿ ಇದ್ದು, ನಗರದಲ್ಲಿ ಇದ್ದು ಊಟ ಮಾಡಿ ತಮ್ಮ ಅಭ್ಯಾಸಗಳನ್ನು ಮುಂದುವರಿಸುವುದಕ್ಕೆ ಅವಕಾಶ ಮಾಡಿಕೊಡಬೇಕು ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ವಾಟಾಳ್ ನಾಗರಾಜ್ (ಚಾಮರಾಜ ಪೇಟೆ).— ಶ್ರೀಮಾನ್ ದೇವೇಗೌಡರು, ನಾನು, ಏನು ನಿಲುವಳಿ ಸೂಚನೆ ತಂದಿದ್ದೇವೆ ಇದು ಬಹಳ ಗುರುತರವಾದ ಮತ್ತು ಬಹಳ ಗಂಭೀರ ವಾದ ಪ್ರಶ್ನೆ. ಶ್ರೀಮಾನ್ ಶಿವಣ್ಣನವರು ಒಂದು ಹೇಳಿಕೆ ಕೊಟ್ಟಿದ್ದಾರೆ. ಮುಖ್ಯಮಂತ್ರಿಗಳು ಮತ್ತೊಂದು ಹೇಳಿಕೆ ಕೊಟ್ಟಿದ್ದಾರೆ. ಶ್ರೀಮಾನ್ ಕೆ. ಎಚ್. ಪಾಟೀಲರು ಇನ್ನೊಂದು ಹೇಳಿಕೆ ಕೊಟ್ಟಿದ್ದಾರೆ. ಶ್ರೀಮಾನ್ ಕೆ. ಟಿ. ರಾತೋಡ್ ರವರು ಬಿಜಾಪುರ ಜಿಲ್ಲೆಯ ಅಭಾವಪೀಡಿತ ಪ್ರದೇಶದ ವಿದ್ಯಾರ್ಥಿಗಳಿಗೆ ಪರೀಕ್ಷಾ ಶುಲ್ಕ ವಿನಾಯಿತಿ ನೀಡಲಾಗಿದೆ ಎಂದು ಒಂದು ಕಡೆ ತಿಳಿಸಿದರು, ಅನಂತರ ಇನ್ನೊಂದು ರೀತಿಯಲ್ಲಿ ಮುಖ್ಯಮಂತ್ರಿಗಳು ಒಂದುಕಡೆ ತಿಳಿಸಿದರು. ಇದರಲ್ಲಿ ಯಾರು ತಿಳಿಸಿದಂಥ ಹೇಳಿಕೆಗಳು ಸಮಂಜಸವಾಗಿವೆ, ನ್ಯಾಯವಾಗಿವೆ, ಯಾವ ಹೇಳಿಕೆ ಮೇಲೆ ವಿದ್ಯಾರ್ಥಿಗಳು ನಿಲ್ಲಬೇಕೆಂದು ವಿಶ್ವವಿದ್ಯಾನಿಲಯ ಒಂದು ಪರೀಕ್ಷೆ ಆಗುತ್ತಾ ಇದೆ. ಇದು ಅಂತರಿಕ್ಷದಲ್ಲೂ ಇಲ್ಲ, ಕೆಳಗೂ ಇಲ್ಲ ತ್ರಿಶಂಕದಲ್ಲಿದ್ದ ಹಾಗೆ ಆಗಿದೆ.

(ಶ್ರೀ ಪಾಟಾಳ್ ನಾಗರಾಜ್)

ಪೋಲೀಸರ ಕೈಗೆ ಸಿಕ್ಕಿ ನರಕಯಾತನೆ ಆಗುತ್ತಿದೆ. ಅದು ಬರಗಾಲ ಪ್ರದೇಶ, ಅಲ್ಲಿ ಹೊಟ್ಟೆಗೆ ಅನ್ನವಿಲ್ಲ, ಆಹಾರವಿಲ್ಲದೆ ನರಳುತ್ತಾ ನರಕಯಾತನೆ ಅನುಭವಿಸುತ್ತಾ ಇರುವ ಜನರಿಗೆ ಪೋಲೀಸರ ಪಾಶವಿಕೃತ್ಯ ತಡೆಯುವುದಕ್ಕೆ ಸಾಧ್ಯವಿಲ್ಲವಾಗಿದೆ. ಇದನ್ನು ನೋಡಿದರೆ ಮಂತ್ರಿಗಳಲ್ಲಿ ಹೊಂದಾಣಿಕೆ ಇಲ್ಲವೆನಿಸುತ್ತದೆ. ಅವರುಗಳು ಹೇಳಿಕೆ ಕೊಡುವುದನ್ನು ನೋಡಿದರೆ ಅವರು ಮುಖ್ಯಮಂತ್ರಿಗಳ ಮೇಲೆ ತಿರುಗಿ ಬಿದ್ದಿದ್ದಾರೆ ಎಂದು ನನಗೆ ಅನುಮಾನವಾಗಿದೆ. ಮುಖ್ಯಮಂತ್ರಿಗಳಿಗೆ ಕೆಟ್ಟ ಹೆಸರು ಬರಲಿ ನಮ್ಮ ಪಾಡಿಗೆ ನಾವು ಹೇಳಿಬಿಟ್ಟೋಣ ಎಂದು ಒಂದು ತರಹ ಭಾವನೆ ಅವರಲ್ಲಿ ಇರುವ ಹಾಗೆ ಕಾಣುತ್ತದೆ. ಇನ್ನು ಅವರು ವಿಧಾನಸೌಧವನ್ನು ಯಾರಿಗೆ ಮಾರುತ್ತಾರೋ ಗೊತ್ತಿಲ್ಲ. ವಿದ್ಯಾರ್ಥಿಗಳು ಬಂದ ತಕ್ಷಣ ಹೈದರಾಬಾದ್ ನವಾಬರ ಹಾಗೆ ಆರ್ಡರ್ ಮಾಡಿದರು. ಅವರ ಧೈರ್ಯಕ್ಕೆ ನಾನು ಮೆಚ್ಚುತ್ತೇನೆ. ಅವರು ಕೊಟ್ಟ ಹೇಳಿಕೆ ನೋಡುತ್ತಾ ಇದ್ದರೆ ಮಹಮದ್‌ಬನ್ ತೊಗಲಕ್‌ನ ಕಾಲ ನೆನಪು ಬರುತ್ತದೆ. ನಿಮಿಷಕ್ಕೆ ಒಂದು ಸಾರಿ, ರಾತ್ರಿ ಒಂದು ಸಾರಿ, ಹಗಲು ಒಂದು ಸಾರಿ ಅವರು ಕೊಡುವ ಹೇಳಿಕೆ ಬಗ್ಗೆ ವಿಚಾರ ಮಾಡಬೇಕಾಗಿದೆ. ಆದುದರಿಂದ ನಾನು ತೀರ ಆಳವಾಗಿ ಇವರ ಬಗ್ಗೆ ಚರ್ಚೆಮಾಡುವುದಕ್ಕೆ ಹೋಗದಿದ್ದರೂ ಸ್ಪಷ್ಟವಾಗಿ ಶಿವಣ್ಣನವರು ಹೇಳಿರತಕ್ಕ ಹೇಳಿಕೆ ಸಮಂಜಸವಾಗಿದೆ, ರಾತೋಡ್‌ರವರು ಕೊಟ್ಟಿರತಕ್ಕ ಹೇಳಿಕೆ ಸಮಂಜಸವಾಗಿದೆ. ಸರ್ಕಾರ ಇದನ್ನು ಒಪ್ಪಿದ್ದೇಪೆ ಎನ್ನತಕ್ಕ ನಿಲುವನ್ನು ತಾವು ಈ ಸಭೆಯಲ್ಲಿ ಸ್ಪಷ್ಟಪಡಿಸಬೇಕು. ಅವರು ಹೇಳಿರುವುದು ನಿರಾಧಾರವಾದುದು ಪತ್ರಿಕೆಯವರು ನಮ್ಮನ್ನೆ ಹಾಕಿದ್ದಾರೆ ಎಂದು ಹೇಳುವುದು ಸರಿಯಲ್ಲ. ಅನೇಕ ಜನ ಮಂತ್ರಿಗಳು ಜನಗಳ ಎದುರಿಗೆ ಹೇಳುತ್ತಾರೆ, ಶಾಸನಸಭೆಗೆ ಬಂದು ಪತ್ರಿಕೆಯವರು ಸರಿಯಾಗಿ ಹಾಕಿಲ್ಲ ರಿಪೋರ್ಟು ಸರಿಯಾಗಿ ಮಾಡಿಲ್ಲ ಎನ್ನುವುದು ಪಾಪ ಇದ್ದೇ ಇದೆ. ನಾನು ಬಹಳ ಗಂಭೀರವಾಗಿ ಹೇಳುತ್ತಾ ಇದ್ದೇನೆ. ನೀವು ಹೇಳಿಕೆ ಕೊಡುವಾಗ ಸ್ವಲ್ಪ ಲಂಗು ಲಗಾಮನ್ನು ಹಾಕಿ ತಮ್ಮ ಹೇಳಿಕೆಯನ್ನು ಜವಾಬ್ದಾರಿಯಿಂದ ಸರ್ಕಾರದ ಮೇಲೆ ಸಂಪೂರ್ಣ ಹಿಡಿತವಿಟ್ಟುಕೊಂಡು, ನಿಮ್ಮ ಲೀಡರು ಹೇಳಿದ ಮಾತಿನ ಮೇಲೆ ಅಥವಾ ಮಂತ್ರಿಮಂಡಲದ ತೀರ್ಮಾನದ ಮೇಲೆ ಕೇಳಿಕೆ ಕೊಟ್ಟರೆ ಚೆನ್ನಾಗಿರುತ್ತದೆ. ಒಂದುಕಡೆ ಹೇಳಿಕೆ ಕೊಟ್ಟಿದ್ದೀರಿ, ಆದರೆ ವಿದ್ಯಾರ್ಥಿಗಳಿಗೆ ಫೀಸ್ ಕಡಿಮೆಯಾಗಿಲ್ಲ. ಶ್ರೀಮಾನ್ ಕೆ. ಎಚ್. ಪಾಟೀಲರು ಉತ್ತರ ಕರ್ನಾಟಕದಲ್ಲಿ ನಾನೇ ಪಾಳೇಗಾರ, ನಾನೇ ಲೀಡರು ನನ್ನ ಮಾತನ್ನು ಬಿಟ್ಟು ಇವನು ಯಾರು ಇಲ್ಲಿಗೆ ಬಂದು ಹೇಳುವುದಕ್ಕೆ ಎಂದು ಅನ್ನುವ ರೀತಿಯಲ್ಲಿ ಹೇಳಿದ್ದಾರೆ. ಅವರವರಲ್ಲೇ ಪಾಪ ಇರಬೇಕೆಂದು ಕಾಣಿಸುತ್ತದೆ. ಏನೇ ಆದರೂ ಚಿಂತೆಯಿಲ್ಲ ಮಾನ್ಯ ಮುಖ್ಯ ಮಂತ್ರಿಗಳಲ್ಲಿ ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ. ಇವೊತ್ತು ಪೋಲೀಸರ ಗುಂಡಾಗಿರಿ ಏನು ನಡೆದಿದೆ ಇದರಬಗ್ಗೆ ಕೂಡಲೇ ಜುಡಿಷಿಯಲ್ ಎನ್‌ಕ್ವೈರಿ ಮಾಡಬೇಕೆಂದು ಬಾಪೂಗೌಡರ ಜೊತೆಗೆ ನಾನೂ ಧ್ವನಿಗೂಡಿಸಿ ಹೇಳುತ್ತೇನೆ. ಈ ಬರಗಾಲ ಪೀಡಿತ ಜನತೆಗೆ ಲಾರಿ ಏಟು, ಟಿಯರ್ ಗ್ಯಾಸ್ ಮತ್ತು ಬಂದೂಕದಿಂದ ಕೊಡೆಯತಕ್ಕ ಕೃತ್ಯ ನಿಮ್ಮ ತತ್ವಕ್ಕೆ ವಿರುದ್ಧವಾಗುತ್ತದೆ. ದೇಶದಲ್ಲಿ ಜನತೆಗೆ ಸಮಾಜವಾದದ ತಮಟೆ ಹೊಡೆದು ಬಂದ್ದಿದ್ದೀರಿ. ಇನ್ನು ಎರಡೂವರೆ ವರ್ಷಗಳಿಂದ ನಿಮ್ಮ ಸಮಾಜವಾದ ಎಷ್ಟರಮಟ್ಟಿಗೆ ಬರುತ್ತಿದೆ ಎಂದರೆ ಬಿಜಾಪುರ, ಗುಲ್ಬರ್ಗಾ ಮತ್ತು ಬೀದರ್ ಜಿಲ್ಲೆಯ ದಾರುಣ ಪರಿಸ್ಥಿತಿಯನ್ನು ನೋಡಿದಾಗ ತಮಗೇ ಅರ್ಥವಾಗುತ್ತದೆ. ಇದನ್ನು ಸ್ಪಷ್ಟಪಡಿಸಬೇಕಾದ್ದು ನನ್ನ ಕರ್ತವ್ಯ. ನಾನು ವೈಯಕ್ತಿಕವಾಗಿ ಮಾತನ್ನು ಬೆಳೆಸುವುದಕ್ಕೆ ಹೋಗುವುದಿಲ್ಲ. ತಮ್ಮ ನಹೋದ್ಯೋಗಿಗಳು ಏನು ಹೇಳಿದ್ದಾರೆ ಅದು ನಿಜವಿದ್ದರೆ ಖಂಡಿತವಾಗಿ ಅವರು ಹೇಳಿರುವುದಕ್ಕೆ ನಾನು ಸ್ಪಿಕ್ ಆನ್ ಆಗಿದ್ದೇನೆ ಅದು ಮಂತ್ರಿಮಂಡಲದ ಮಾತು ಅವರು ಹೇಳಿದ ಮಾತು, ನನ್ನ ಮಾತು ಇವುಗಳಲ್ಲಿ ಭೇದ ಭಾವನೆ ಏನೂ ಇಲ್ಲ. ನಮ್ಮ ಮಂತ್ರಿಮಂಡಲದಲ್ಲಿ ಯಾರಲ್ಲೂ ಡಿಫರೆನ್ಸ್ ಆಫ್ ಒಪಿನಿಯನ್ ಇಲ್ಲ ಎಂದು ಹೇಳಬೇಕು. ಒಬ್ಬೊಬ್ಬರು ಒಂದೊಂದು ತರಹ ಹೇಳಿಕೆ ಕೊಡುತ್ತಿರುವುದು ನೋಡಿದರೆ ಅರಸರವರ ಪರಿಸ್ಥಿತಿ ಏನಾಗಬಹುದು ? ಅವರ ಅಧಿಕಾರಕ್ಕೆ ಧಕ್ಕೆ ಬಂದಿದೆಯೇ ? ತಾವು ಪ್ರೋಗ್ರೆಸ್ಸಿವ್ ಆದ ಸಮಾಜವಾದದ ಕೆಲವು ಮಾತುಗಳನ್ನು ಆಡುವುದರಿಂದ ನಿಮ್ಮ ಬಗ್ಗೆ ನನಗೆ ಕಿಂಚಿತ್ ಗೌರವ ಇದೆ. ಆದ್ದರಿಂದ ನಿಮ್ಮನ್ನು ಒಳಗಡೆ ಬುಡ ಮೇಲು ಮಾಡುವ ಕೃತ್ಯ ನಡೆದಿದೆಯೇ ಎಂದು ನನಗೆ ಭಯವಾಗಿದೆ. ಸತ್ಯಾಗ್ರಹ ಮಾಡುತ್ತೇವೆಂದು ಇಲ್ಲಿಗೆ ಬಂದು ಅದು ನಾಟಕೀಯ ಸತ್ಯಾಗ್ರಹವಾಗಿ ಮುಕ್ತಾಯವಾಯಿತು. ಯಾತಕ್ಕೆಂದರೆ ಜನರು ತಿರುಗಿ ಬಿದ್ದಾಗ ಏನು ಮಾಡಬೇಕು ? ಸತ್ಯಾಗ್ರಹ ಮಾಡುತ್ತೇವೆಂದು ಲಾರಿಯಲ್ಲಿ ಬಂದರೆಂದು ಪ್ರತಿಕೆಯಲ್ಲಿ ವರದಿಯಾಯಿತು ಅಲ್ಲಿಂದ ಬಂದು ನಿಮ್ಮ ಮುಂದೆ ಕೈಮುಗಿದು ಹೊರಟುಹೋಯಿತು. ಇಂಥ ಸತ್ಯಾಗ್ರಹ ಎಲ್ಲೂ ನೋಡಿಲ್ಲ. ಸತ್ಯಾಗ್ರಹ ಮಾಡುತ್ತೇವೆಂದು ಹೊರಟಂಥ ಜನರ ಧೈರ್ಯ ನೋಡಿದಾಗ ಮುಖ್ಯಮಂತ್ರಿಗಳ ಮಾತು ಕೇಳದೆ ಅವರ ಮನೆ ಮುಂದೆ ಕೂತಿದ್ದಾರೆ

ಎಂದು ಅದಕ್ಕೆ ನಾನು ಮೈಸೂರಿನಲ್ಲಿ ಒಂದು ಹೇಳಿಕೆ ಕೊಟ್ಟೆ, ನಿಮ್ಮ ಸತ್ಯಾಗ್ರಹಕ್ಕೆ ನನ್ನ ಬೆಂಬಲ ಇದೆ ಎಂದು. ಬೆಳಿಗೆ ಮೈಸೂರಿನಿಂದ ಬಂದು ನೋಡುತ್ತೇನೆ ಅಲ್ಲಿ ಯಾವ ಸತ್ಯಾಗ್ರಹ ಇಲ್ಲ. ಬೆಳಿಗ್ಗೆ ಪತ್ರಿಕೆಯಲ್ಲಿ ನೋಡಿದರೆ ಅವರು ನಮಗೆ ಕೈಮುಗಿದು ಹೋಗುತ್ತಿದ್ದಾರೆ. ಇದು ಎಂತಹ ಸತ್ಯಾಗ್ರಹ. ಈ ನಾಟಕೀಯ ಸತ್ಯಾಗ್ರಹ ಬೇಡ, ಇದರಿಂದ ಜನತೆಗೆ ಅನುಕೂಲವಾಗುವುದಿಲ್ಲ. ಇದನ್ನು ಸ್ಪಷ್ಟಪಡಿಸಬೇಕೆಂದು ಹೇಳುತ್ತೇನೆ.

4-00 P.M.

†ಶ್ರೀ ಎಂ. ಎಸ್. ಕೃಷ್ಣನ್ (ಮಲ್ಲೇಶ್ವರಂ).—ನಾನು ಈ ನಿಲುವಳಿ ಸೂಚನೆಗೆ ಬೆಂಬಲ ಕೊಡತಕ್ಕಂಥವನು. ಈಗ ಅಡ್ಜರ್ನ್‌ಮೆಂಟ್ ಮೋಷನ್ ಅನ್ನು ಒಪ್ಪಬೇಕೋ, ಬಿಡಬೇಕೋ, ಎನ್ನುವ ಮುಖ್ಯ ಪ್ರಶ್ನೆ ನಮ್ಮ ಮುಂದೆ ಇದೆ. ಈ ಅಡ್ಜರ್ನ್‌ಮೆಂಟ್ ಮೋಷನ್ ಅನ್ನು ಮಾನ್ಯ ದೇವೇಗೌಡರು, ಪಾಟೀಲ್ ನಾಗರಾಜ್ ಅವರು, ನಾವು ಸೇರಿಸಿ ಕಳುಹಿಸಿದ್ದೇವೆ; ಇವಕ್ಕೆ ಅವಕಾಶ ಕೊಡಬೇಕೇ ಬೇಡವೇ ಎನ್ನುವ ಪ್ರಶ್ನೆ ಇದೆ. ಬಹಳ ಮುಖ್ಯವಾದ ಪ್ರಶ್ನೆ ಎನ್ನಿರುವುದು, ಒಬ್ಬೊಬ್ಬ ಮಂತ್ರಿ ಒಂದೊಂದು ರೀತಿಯ ಹೇಳಿಕೆಯನ್ನು ಕೊಡುವುದು, ಒಂದೊಂದು ರೀತಿಯ ಆಶ್ವಾಸನೆಯನ್ನು ಕೊಡುವುದು ಸರಿಯೇ, ತಪ್ಪೇ ಎಂಬುದು. ನ್ಯಾಯವಾದ ರೀತಿಯಿಂದ ಅಡ್ಮಿನಿಸ್ಟ್ರೇಷನ್ ಅನ್ನು ನಡೆಸುವುದು, ಬಹಳ ಮುಖ್ಯವಾದ ಪ್ರಶ್ನೆಯಾಗಿದೆ. ಇದರ ಬಗ್ಗೆ ಚರ್ಚೆಗೆ ಅವಕಾಶ ಕೊಡಬೇಕು ಎಂದು ನನ್ನ ಅಭಿಪ್ರಾಯ. ಈ ತರಹ ಪರಿಸ್ಥಿತಿ ಬರುವುದಕ್ಕೆ ಕಾರಣಕರ್ತರು ಯಾರು ಎನ್ನುವುದೂ ಬಹಳ ಮುಖ್ಯವಾದ ಪ್ರಶ್ನೆ. ಇಂಥ ಪರಿಸ್ಥಿತಿ ಹಿಂದೆ ಉಂಟಾದಾಗ ವಿದ್ಯಾರ್ಥಿಗಳು ಗಲಭೆ ನಡೆಸಿದರು, ವಿದ್ಯಾರ್ಥಿಗಳು ಬಸ್ಸಿಗೆ ಕಲ್ಲು ಎಸೆದರು, ಲ್ಯಾಂಪ್ ಹೊಡೆದರು. ಆದ್ದರಿಂದ ಪೋಲೀಸರು ಬಂದೇ ಬರಬೇಕಾಗುತ್ತದೆ ಎಂದು ಸರ್ಕಾರ ತಮ್ಮ ಸ್ಪಷ್ಟ ಉತ್ತರವನ್ನು ಕೊಡುವುದು ಉಂಟು. ಅವನ್ನು ಕೇಳಿ ಕೇಳಿ ನಮಗೆ ಜೊಲ್ಲು ಕಟ್ಟಿದೆ, ನಿರಾಸೆ ಬಂದ ಹಾಗಾಗಿದೆ. ನಿಜಾಂಶ ಏನೆಂದರೆ, ಪೋಲೀಸರು ಬರುವುದಕ್ಕೆ ಮುಂಚೆ ಸರ್ಕಾರದವರು ಏನು ಕಾರ್ಯಕ್ರಮ ತೆಗೆದುಕೊಂಡಿದ್ದರು? ಸರ್ಕಾರ ಮೊದಲೆ ಕಾರ್ಯಕ್ರಮ ತೆಗೆದುಕೊಂಡಿದ್ದರೆ, ಅವರಲ್ಲೂ ಆಭಾವಪೀಡಿತ ಪ್ರದೇಶಗಳಲ್ಲಿ, ಬೀದರ್, ಗುಲ್ಬರ್ಗ ಮತ್ತು ಬಿಜಾಪುರ ಜಿಲ್ಲೆಗಳ ಬಗ್ಗೆ ಮೊದಲೇ ತೀರ್ಮಾನ ಮಾಡಿದ್ದರೆ ಈ ಪ್ರಶ್ನೆ ಇರಲಿಲ್ಲ. ಈ ವಿಷಯವನ್ನು ಹೋದ ಅಸೆಂಬ್ಲಿಯಲ್ಲಿಯೂ ಸಹ ಚರ್ಚೆ ಮಾಡುವುದಕ್ಕೆ ಆ ಪ್ರದೇಶದಿಂದ ಬಂದಂಥ ಮಾನ್ಯ ಸದಸ್ಯರು ಬಹಳ ಕಳಕಳಿಯಿಂದ ಮನವಿ ಮಾಡಿಕೊಂಡರು. ಮಾನ್ಯ ಪಾಟೀಲರು ಬಂದಿಲ್ಲ, ಅವರು ಕಣ್ಣೀರು ಇಟ್ಟರು, ಆಗ ಅವರಿಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟು ಮಾತನಾಡಿ ಎಂದು ಹೇಳಿದರಿ. ವಿದ್ಯಾರ್ಥಿಗಳ ಶುಲ್ಕ ಮಾಫಿ ಮಾಡಬೇಕು ಎಂದು ಅವರು ಕೇಳಿಕೊಂಡರು, ಎಲ್ಲರೂ ಕೇಳಿ ಕೊಂಡರು, ಅದರ ಮೇಲೆ ಸರ್ಕಾರ ತೀರ್ಮಾನ ಮಾಡಬೇಕಾಗಿತ್ತು; ಹಾಗೆ ಏತಕ್ಕೆ ಕೂತು ಕೊಂಡಿರಿ? ಸರ್ಕಾರದವರು ಬೇರೆ ಬೇರೆ ಹೇಳಿಕೆಯನ್ನು ಕೊಡುವುದರಿಂದ ವಿದ್ಯಾರ್ಥಿಗಳ ಆಂಧೋಳನ ಬಂತು. ಪೋಲೀಸರು ಸಿಕ್ಕಾಪಟ್ಟೆ ಹೊಡೆಯುವುದು, ಬಡೆಯುವುದು ಆಗಿದೆ. ಪೋಲೀಸರನ್ನು ದೂರಿ ಪ್ರಯೋಜನವಿಲ್ಲ; ಅವರು ಮಾಡಿದ್ದು ನ್ಯಾಯ ಎಂದು ಹೇಳುವುದಿಲ್ಲ, ಅನ್ಯಾಯ ಮಾಡಿದ್ದಾರೆಂದು ಎಲ್ಲಾ ಗೊತ್ತಾಗಿದೆ. 12ವರ್ಷದ ಹುಡುಗನಿಗೆ ಹೆಟ್ಟು ಬಿದ್ದು ರಕ್ತ ಕಾರಿ ಕೊಂಡಿದ್ದಾನೆ. ಇದರ ಜವಾಬ್ದಾರಿ ಸರ್ಕಾರದವರದ್ದು ಎಂದು ಸ್ಪಷ್ಟವಾಗಿ ಹೇಳಬೇಕಾಗಿದೆ. ಸರ್ಕಾರದವರು ಕೈತೊಳೆದುಕೊಂಡಿದ್ದಾರೆ, ಜವಾಬ್ದಾರಿ ಹೊತ್ತು ಕೊಂಡಿಲ್ಲ, ಹೊತ್ತುಕೊಂಡರೂ ನಿರ್ವಹಿಸಿಲ್ಲ. ಮಾನ್ಯ ಮಂತ್ರಿಗಳಾದ ಹುಚ್ಚಮಾಸ್ತಿಗೌಡರು ಒಂದು ಸ್ಟೇಟ್‌ಮೆಂಟನ್ನು ಮಾಡಿದರು; ಮುಖ್ಯಮಂತ್ರಿಗಳೂ ಸಹ ಮಾಡಿದರು, ಸ್ಟೇಟ್‌ಮೆಂಟ್ ಕಟ್ಟಿಕೊಂಡು ಏನು ಪ್ರಯೋಜನ? ಅದರಿಂದ ಹೊಟ್ಟೆ ತುಂಬುವುದಿಲ್ಲ; ಕೆಲಸಗಳು ಆಗುವುದಿಲ್ಲ; ಜನಗಳಿಗೆ ಪರಿಹಾರ ಆಗುವುದಿಲ್ಲ; ಪರಿಹಾರ ಸಿಕ್ಕುವ ಕೆಲಸಗಳನ್ನು ಏನು ಮಾಡಿದ್ದೀರಿ? ನೀವು ಏನೂ ಮಾಡಿಲ್ಲ. ತಮ್ಮ ಜವಾಬ್ದಾರಿಯಿಂದ ತಪ್ಪಿಸಿಕೊಂಡಿದ್ದೀರಿ ಎಂದು ಸ್ಪಷ್ಟವಾಗಿ ತಮ್ಮ ಮೇಲೆ ಹೊಣೆಗಾರಿಕೆಯನ್ನು ಹೊರಿಸಬೇಕಾಗಿದೆ.

ಮೂರನೆಯ ವಿಷಯ, ಯಾವರೀತಿ ಪರಿಹಾರ ಕಂಡುಹಿಡಿಯುವುದು, ಎಂದು. ಮಾನ್ಯ ಸದಸ್ಯರಾದ ಪಾಟೀಲ್ ನಾಗರಾಜ ಅವರ ಜೊತೆಗೆ ಈ ವಿಷಯದ ಬಗ್ಗೆ ನಾನೂ ಸೇರಿಕೊಳ್ಳಬೇಕಾಗಿದೆ. ತಕ್ಷಣ ಹೇಳಿಕೆ ಕೊಡುವುದರಿಂದ ಏನೂ ಪ್ರಯೋಜನ ಇಲ್ಲ. ಏನೇ ಹೇಳಿಕೆಯನ್ನು ಕೊಡಲಿ, ಒಂದು ಸೂಡಿಷಿಯರ್ ಎನ್‌ಕ್ವೈರಿ ಮಾಡಲೇಬೇಕಾಗುತ್ತದೆ. ತಪ್ಪು ಮಾಡಿದ್ದಾರೆಂದು ತಪ್ಪಿತಸ್ಥರನ್ನು ಶಿಕ್ಷೆಗೆ ಗುರಿ ಮಾಡಬೇಕಾಗುತ್ತದೆ. ನಾವು ಹಾಗೆ ಹೇಳಿದ ಮೇಲೆ, ನಿಮ್ಮವಾದ

(ಶ್ರೀ ಎಂ. ಎಸ್. ಕೃಷ್ಣನ್)

ಏನು ಮಾಡುತ್ತೀರಿ ಎಂದು ಗೊತ್ತು ಎಲ್ಲದಕ್ಕೂ ಜುಡಿಷಿಯಲ್ ಎನ್‌ಕ್ವಯರಿ ಕೇಳುತ್ತಾರೆ; ರಾತಿ ಥಾರ್ಜು ಆಗಲಿ, ಗೋಳಿಬಾರ್ ಆಗಲಿ ಏನೇ ಆದರೂ ಜುಡಿಷಿಯಲ್ ಎನ್‌ಕ್ವಯರಿ ಕೇಳುತ್ತಾರೆ ಅಪ್ರೋಪ್ರಿಷನ್‌ನವರ ವಾದ ಆರೀತಿ ಇದ್ದೇ ಇರುತ್ತದೆ, ಏನು ಮಾಡುವುದು ಎಂದು ಹೇಳುತ್ತಾರೆ. ನಮಗೂ ಜವಾಬ್ದಾರಿ ಇದೆ. ಎಲ್ಲದಕ್ಕೂ ಜುಡಿಷಿಯಲ್ ಎನ್‌ಕ್ವಯರಿ ಕೇಳುತ್ತೇವೆಯೇ? ಕೊಲೆ ನಡೆದರೆ ಜುಡಿಷಿಯಲ್ ಎನ್‌ಕ್ವಯರಿ ಕೇಳುತ್ತೇವೆ. ಮುಕ್ಕಳಿಗೆ ಸಿಕ್ಕಾಪಟ್ಟೆ ಹೊಡೆದರೆ ಸರ್ವೀಸಾಮಾನ್ಯವಾಗಿ ಜುಡಿಷಿಯಲ್ ಎನ್‌ಕ್ವಯರಿ ಕೇಳುತ್ತೇವೆ. ಆದ್ದರಿಂದ ಈಗ ಜುಡಿಷಿಯಲ್ ಎನ್‌ಕ್ವಯರಿ ಆಗಬೇಕು. ಮತ್ತು ಇದು ಬಹಳ ಮುಖ್ಯವಾದ ಪ್ರಶ್ನೆ, ಇನ್ನೂ ಹೆಚ್ಚಿನ ರೀತಿಯಲ್ಲಿ ಎಲ್ಲರಿಗೂ ಮಾತನಾಡುವುದಕ್ಕೆ ಅವಕಾಶ ಮಾಡಿಕೊಡಬೇಕು. ಆ ರೀತಿ ಏನೂ ಮಾಡಬೇಕಾಗಿಲ್ಲ, ಸ್ಟೇಟ್‌ಮೆಂಟ್ ಕೊಡಿ ಎಂದು ಹೇಳಿದೆ ಎಲ್ಲರಿಗೂ ಮಾತನಾಡುವುದಕ್ಕೆ ಅವಕಾಶ ಮಾಡಿಕೊಡಬೇಕು.

ಶ್ರೀ ಕಾಗೋಡು ತಿಮ್ಮಪ್ಪ (ಸಾಗರ).—ಅಧ್ಯಕ್ಷೆಣಿಯವರೇ, ಗುಲ್ಬರ್ಗದಲ್ಲಿ ನಡೆದಂಥ ಹಲ್ಲೆಯ ಬಗ್ಗೆ ತಂದಿರತಕ್ಕಂಥ ನಿಲುವಳಿ ಸೂಚನೆಯನ್ನು ನಾನು ಸಮರ್ಥನೆ ಮಾಡುತ್ತೇನೆ. ಈ ಪರಿಸ್ಥಿತಿ ಉಂಟಾಗುವುದಕ್ಕೆ ಮುಖ್ಯವಾಗಿ ರಾಜ್ಯ ಮಂತ್ರಿಗಳಾದ ಶ್ರೀಮಾನ್ ಶಿವಣ್ಣನವರು ಕಾರಣರು; ಎನ್ನುವುದನ್ನು ನಾವು ಯಾರೂ ಮರೆಯಬಾರದು. ಬೇರೆ ಕಾಲದಲ್ಲಿ ವಿದ್ಯಾರ್ಥಿಗಳ ಮೇಲೆ ಬೇರೆ ಆಮಾನುಷವಾದಂಥ ಕೃತ್ಯ ನಡೆದಿದ್ದರೆ ಇಷ್ಟೊಂದು ಕಳವಳವನ್ನು ನಾವು ವ್ಯಕ್ತ ಪಡಿಸುತ್ತಾ ಇರಲಿಲ್ಲ. ಆದರೆ ಹಸಿವಿನ ದವಡೆಗೆ ಸಿಕ್ಕಿ ನರಳುತ್ತಿರುವವರು ಹೇಗೆ ಬದ ಕಬೇಕು ಎನ್ನುವ ಚಿಂತೆ ಮಾಡುತ್ತಿದ್ದಾರೆ. ಜೀವನದ ಅತ್ಯಂತ ಕರಾಳವಾದ ದಿನಗಳನ್ನು ಅವರು ನೋಡುತ್ತಾ ಇರುವಾಗ ಈ ರೀತಿ ಮಾಡುವುದು ಸರಿಯಲ್ಲ. ಸರ್ಕಾರದ ಮುಖ್ಯ ಕಾರ್ಯದರ್ಶಿಗಳು ಅಲ್ಲಿಗೆ ಹೋದಾಗ ಜನಕ್ಕೆ ಉತ್ತರ ಹೇಳದೆ ವಾಪಸ್ಸು ಬಂದಿದ್ದಾರೆ. ರಾಜ್ಯ ಸಚಿವರು ಉತ್ತರ ಹೇಳದೆ ವಾಪಸ್ ಬಂದಿದ್ದಾರೆ. ಜನ ಕಾದು ಕಾದು ಬೇಸತ್ತು, ಹೇಗೆ ಬದುಕಬೇಕು ಎಂದು ಅವರದು ದೊಡ್ಡ ಚಿಂತೆಯಾಗಿದೆ. ಅವರು ಕಂಗಾಲಾಗಿದ್ದಾರೆ. ಅಲ್ಲಿಯ ಜನ ಕೆಲಸ ಹುಡುಕಿಕೊಂಡು ಬೆಂಗಳೂರಿಗೆ ಬರುತ್ತಿದ್ದಾರೆ. ಇದರ ಬಗ್ಗೆ ಯಾರೂ ಕಟ್ಟುಕತೆ ಹೇಳಬೇಕಾಗಿಲ್ಲ. ಇಂಥ ದುಸ್ಥಿತಿ ಇರುವಾಗ ಜನಕ್ಕೆ ಒಂದು ಭರವಸೆ ಕೊಡುವಾಗ ಬಹುಜಾಗರೂಕತೆಯಿಂದ ಮತ್ತು ಜವಾಬ್ದಾರಿಯಿಂದ ಕೊಡಬೇಕಾಗಿದೆ. ಮುಖ್ಯಮಂತ್ರಿಗಳು ವಿದ್ಯಾರ್ಥಿಗಳನ್ನು ಅಲ್ಲಿ ಭೇಟಿಯಾದಾಗ, ಮಾಮೂಲಿನಂತೆ ಆಲೋಚನೆ ಮಾಡೋಣ, ವಿಚಾರ ಮಾಡೋಣ ಎಂದು ಹೇಳಿದರು. ಮುಖ್ಯಮಂತ್ರಿಗಳು ನೋಡುತ್ತಾರೆ ಎಂದು ವಿದ್ಯಾರ್ಥಿಗಳು ಸಮಾಧಾನ ಪಟ್ಟುಕೊಂಡಿದ್ದರು. ರಾಜ್ಯ ಸಚಿವರಾದ ಮಾನ್ಯ ಶಿವಣ್ಣನವರು ಹೋದಾಗ ನೇರವಾಗಿ ಆಜ್ಞೆಯನ್ನು ಮಾಡಿದ್ದಾರೆ. ಶುಲ್ಕವನ್ನು ರದ್ದುಪಡಿಸಲಾಗಿದೆ ಎಂದು ಲಿಖಿತ ಮೂಲಕ ಆಜ್ಞೆಯನ್ನು ಹೊರಡಿಸಿದ್ದಾರೆ. ಈ ಆಜ್ಞೆಯನ್ನು ಕಾರ್ಯಗತ ಮಾಡತಕ್ಕಂಥ ಜವಾಬ್ದಾರಿ ಇಡೀ ಸರ್ಕಾರಕ್ಕೆ ಇದೆ. ಯಾರೇ ಆಗಲಿ, ಯಾಂತ್ರಿಕ ಜವಾಬ್ದಾರಿಯನ್ನು ಉಳಿಸಿಕೊಳ್ಳುವ ದೃಷ್ಟಿಯಿಂದ ಮುಖ್ಯಮಂತ್ರಿಗಳಾದಿಯಾಗಿಯೂ ಎಲ್ಲರನ್ನೂ ಸೇರಿಸಿ ಈ ಆಜ್ಞೆಯನ್ನು ಪರಿಪಾಲನೆ ಮಾಡಬೇಕಾಗಿತ್ತು; ಜಾರಿಗೆ ಕೊಡಬೇಕಾಗಿತ್ತು. ಆ ಕೆಲಸವನ್ನು ಮಾಡದೆ ರಾಜ್ಯಮಂತ್ರಿ ಶಿವಣ್ಣನವರು ಹೊರಡಿಸಿರತಕ್ಕ ಆಜ್ಞೆಯನ್ನು ಪುನಃ ಪ್ರಶ್ನೆ ಮಾಡತಕ್ಕ ಪ್ರವೃತ್ತಿಗೆ ಮಂತ್ರಿಗಳು ಪ್ರಯತ್ನ ಮಾಡಿದ್ದು ನೋಡಿ ಅಲ್ಲಿಯ ವಿದ್ಯಾರ್ಥಿಗಳು ಕಂಗಾಲಾದರು. ಜೀವನವನ್ನೇ ನಡೆಸುವುದಕ್ಕೆ ಕಷ್ಟವಾಗಿರುವಾಗ ಶುಲ್ಕ ಕೊಡುವ ಪರಿಸ್ಥಿತಿ ಎಲ್ಲಿ ಬಂತು? ಬಡವ, ಸಣ್ಣವ, ದೊಡ್ಡವ ಎನ್ನುವ ಭಾವನೆ ಇಲ್ಲ. ಗ್ರಾಮಾಂತರ ಪ್ರದೇಶದಿಂದ ಬರುವ ಯಾವನೇ ಆಗಲಿ, ೫ ಎಕರೆ ಹೊಂದಿರತಕ್ಕ ವ್ಯವಸಾಯಿಗಾರನ ಮನೆಗೆ ನಾನು ಹೋಗಿ ನೋಡಿದ್ದೇನೆ, ಅವರ ಮನೆಯ ಹೆಂಗಸರು ಕೆಲಸ ಮಾಡದೆ ಇರುವವರು ಇಂಥ ದುಸ್ಥಿತಿಯಲ್ಲಿ ಕೆಲಸ ಮಾಡಿ ಕೈ ರಕ್ತ ಸುರಿಯುತ್ತಾ ಇರುವುದನ್ನು ನೋಡಿದ್ದೇನೆ. ಏನಾದರೂ ಕೆಲಸಮಾಡಿ ಬದುಕಬೇಕು, ಒಂದು ರೂಪಾಯಿ ಸಿಕ್ಕಲಿ, ಎಂದು ಮಣ್ಣನ್ನು ಕೊತ್ತು ಕೆಲಸ ಮಾಡಿ ಅವರ ಕೈ ಗುಳ್ಳೆ ಬಂದಿರುವುದನ್ನು ನೋಡಿದ್ದೇನೆ. ಮಾನ್ಯ ಭೂರ್ಜರ್ಡೆಯವರ ಮನೆಯವರಿಗೆ ಕೆಲಸ ಮಾಡುವುದಕ್ಕೆ ಕಳುಹಿಸಿದರೆ, ಏನು ಆಗಬಹುದೋ ಆ ಗತಿಯಾಗಿದೆ. ಅಂಥ ಪರಿಸರದಲ್ಲಿ ಕೆಲಸಮಾಡಿ ಬದುಕಬೇಕಾಗಿದೆ. ವಿಶ್ವಾಮಿತ್ರ ನಾಯಿಯನ್ನು ತಿಂದು ಬದುಕಿದ ಹಾಗೆ ಆ ಜನರು ಏನನ್ನಾದರೂ ಮಾಡಿ ಬದುಕುವ ಕಾಲ ಬಂದಿದೆ. ತಂದೆ ತಾಯಿಗಳು ಮಕ್ಕಳನ್ನು ಸಾಕಲಾರದೆ ಬಿಟ್ಟು ಹೋಗಿರುವ ಪರಿಸ್ಥಿತಿ ಇವತ್ತು ಇದೆ. ಇಂಥ ಪ್ರದೇಶದ ಮಕ್ಕಳನ್ನು ಸಾಕತಕ್ಕ ಹೊಣೆಗಾರಿಕೆ ಸರ್ಕಾರದ, ಇಡೀ ರಾಜ್ಯಕ್ಕೆ ಸೇರಿರತಕ್ಕ ಸಮಸ್ಯೆಯಾಗಿದೆ. ಇಂಥ ಗಂಭೀರ ಪರಿಸ್ಥಿತಿಯಲ್ಲಿರುವಾಗ ಜನರ ಮುಂದೆ,

ಜನರ ಮಧ್ಯೆ ನಡೆದುಕೊಳ್ಳುವ ರೀತಿನೀತಿ ಜಾಗರೂಕತೆಯಿಂದ ಇರಬೇಕು, ಜವಾಬ್ದಾರಿಯಿಂದ ಇರಬೇಕು. ಅಂಥ ಜವಾಬ್ದಾರಿಯಿಂದ ತಪ್ಪಿ ನಡೆದಿರತಕ್ಕ ಕಾರ್ಯವಾಗಿದೆ. ರಾಜ್ಯ ಸಚಿವರಾಗಿರತಕ್ಕ ಶಿವಣ್ಣನವರು ಏನು ಒಂದು ಆಜ್ಞೆಯನ್ನು ತಿಳಿದೆಯೋ, ತಿಳಿಯದೆಯೋ ಅವರ ಅಧಿಕಾರ ವ್ಯಾಪ್ತಿಗೆ ಇದೆಯೋ ಇಲ್ಲದೆಯೋ ಸರ್ಕಾರದ ಪ್ರತಿನಿಧಿಯಾಗಿ ಹೊರಡಿಸಿದ್ದಾರೆ. ಇದರಿಂದ ವಿದ್ಯಾರ್ಥಿಗಳು ಸಂತೃಪ್ತರಾಗಿದ್ದರು, ಸರ್ಕಾರದವರು ಆಜ್ಞೆಯನ್ನು ಹೊರಡಿಸಿದ್ದಾರೆ, ನಮ್ಮ ಕಷ್ಟ ಪರಿಹಾರವಾಗುತ್ತದೆ ಎಂದು ನೆಮ್ಮದಿಯನ್ನು ತಾಳಿದ್ದರು. ಅನಂತರ ಸರ್ಕಾರ ಸಂಬಂಧಪಟ್ಟ ಆಜ್ಞೆಯನ್ನು ಹೊರಡಿಸದೆ ಇರುವುದರಿಂದ ಇಂಥ ಪರಿಸ್ಥಿತಿ ಉಂಟಾಗುವುದಕ್ಕೆ ಕಾರಣವಾಗಿದೆ. ನಿರಪರಾಧಿಗಳಾದ ವಿದ್ಯಾರ್ಥಿಗಳು ಈ ಸಮಯದಲ್ಲಿ ಪೋಲೀಸರ ಕೈಯಿಂದ ಪೆಟ್ಟು ತಿನ್ನಬೇಕಾಯ್ತು. ಈ ಪರಿಸ್ಥಿತಿಗೆ ವಿದ್ಯಾರ್ಥಿಗಳು ಕಾರಣರಲ್ಲ. ಪೋಲೀಸರ ದೌರ್ಜನ್ಯವೇ ಈ ಪರಿಸ್ಥಿತಿಗೆ ಕಾರಣ. ನಿರಪರಾಧಿಗಳಾದ ವಿದ್ಯಾರ್ಥಿಗಳಿಗೆ ತೊಂದರೆಯಾಗಿ ಅವರು ಸಿಟ್ಟಿಗೆ ಏಳಬೇಕಾಗಿ ಬಂತು. ಇದು ಸ್ವಾಭಾವಿಕ. ಪೋಲೀಸರು ವಿದ್ಯಾರ್ಥಿಗಳ ಬಗ್ಗೆ ಕನಿಕರ ತೋರಿಸಬೇಕಾಗಿತ್ತು. ಅಲ್ಲಿ ಒಳ್ಳೆಯ ಪೋಲೀಸ್ ಅಧಿಕಾರಿಗಳೇ ಇದ್ದರು, ಅವರು ಹಿಂಪೆ ಶಿವಮೊಗ್ಗದಲ್ಲಿದ್ದಾಗ ನೋಡಿದ್ದೆ. ಅಂಥವರಿದ್ದಾಗಲೇ ಹೀಗಾದದ್ದಮೇಲೆ ಯಾರನ್ನು ನಂಬಬೇಕೋ ಗೊತ್ತಾಗುವುದಿಲ್ಲ. ಈಗಿನ ಪರಿಸ್ಥಿತಿ ಹೇಗಿದೆ ಎಂದರೆ ಕರ್ನಾಟಕದಲ್ಲಿ ವಿಶ್ವಾಮಿತ್ರನಾಯಿ ತಿಂದ ಹಾಗಿದೆ. ಆದುದರಿಂದ ಎಲ್ಲಾ ದೃಷ್ಟಿಯಿಂದಲೂ ಕೂಡ ಈ ನಿಲುವಳಿ ಸೂಚನೆಯ ಚರ್ಚೆಗೆ ಅವಕಾಶ ಕೊಡಬೇಕಾದ್ದು ಪ್ರಾಮುಖ್ಯವಾದುದು. ಆದುದರಿಂದ ಈ ಸೂಚನೆಗೆ ಅವಕಾಶ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

† ಶ್ರೀ ವಿಶ್ವನಾಥರೆಡ್ಡಿ (ಯಾದ್ಗಿರ್).—ಸನ್ಮಾನ್ಯ ಅಧ್ಯಕ್ಷರೇ, ವಿದ್ಯಾರ್ಥಿಗಳಿಗೆ ಪ್ರಚೋದನೆಯಿಂದ ಲಾಠಿ ಛಾರ್ಜ್ ಆಯಿತೇ ಅಥವ ಪ್ರಚೋದನೆ ಇಲ್ಲದೆ ಆಯಿತೇ ಎಂಬುದು ಮುಖ್ಯವಾದುದು. ಇದರ ಬಗ್ಗೆ ಹೇಳುವುದಾದರೆ ಅಲ್ಲಿ 4 ಗಂಟೆಯ ವೇಳೆಯಲ್ಲಿ ಶ್ರೀ ಕೆ. ಎಚ್. ಪಾಟೀಲರು ಮತ್ತು ಶ್ರೀ ನಂಜೆಗೌಡರಿದ್ದರು. ವಿದ್ಯಾರ್ಥಿಗಳು ಪ್ರಚೋದಿತರಾಗಿದ್ದರು. ಲಾಠಿ ಛಾರ್ಜು ಆಗಿತ್ತು. ವಿದ್ಯಾರ್ಥಿಗಳು ಹೇಗಿರಬೇಕೆಂದು ಶ್ರೀ ಪಾಟೀಲರು ಹೇಳಿದರು, ನಾವು ಸಮಾಧಾನ ಹೇಳಿದಾಗ ವಿದ್ಯಾರ್ಥಿಗಳು ಕುಳಿತರು. ವಿದ್ಯಾರ್ಥಿಗಳು ಶ್ರೀ ಪಾಟೀಲರಲ್ಲಿ ತಮ್ಮ ತೊಂದರೆಯನ್ನು ನಿವೇದನೆ ಮಾಡಿಕೊಂಡರು, ಅವರು ಮುಖ್ಯಮಂತ್ರಿಗಳಿಗೆ ತಮ್ಮ ಕಷ್ಟವನ್ನು ತಿಳಿಸಿರುವುದಾಗಿಯೂ ಅವರ ತಂದೆತಾಯಿಗಳ ಪರಿಸ್ಥಿತಿ ಕೆಟ್ಟಿರುವುದಾಗಿಯೂ ತಮಗೆ ಫೀಜು ಕೊಡಲು ಸಾಧ್ಯವಿಲ್ಲವೆಂದೂ ಹೇಳಿದರು. ಖರೀಫ್ ಬೆಳೆಯಾಗಿಲ್ಲ, ಫೀಜಿನ ಬಗ್ಗೆ ಏನಾಯಿತಿ ಕೊಡಬೇಕು ಎಂದು ತಿಳಿಸಿದಾಗ ಮುಖ್ಯಮಂತ್ರಿಗಳು ಅದರ ಬಗ್ಗೆ ಆಲೋಚನೆಮಾಡಿ ಸೂಕ್ತ ಕ್ರಮ ಕೈಕೊಳ್ಳುವುದಾಗಿ ಆಶ್ವಾಸನೆ ಕೊಟ್ಟು ಹೋದರು, ಅದಾದಮೇಲೆ ಎರಡು ತಿಂಗಳಾದರೂ ಏನೂ ಮಾಡಲಿಲ್ಲ. ಅನಂತರ ಶ್ರೀ ಶಿವಣ್ಣನವರು ಬಂದು ಪೂರ್ತಿಯಾಗಿ ಫೀಜಿನ ಬಗ್ಗೆ ಏನಾಯಿತಿ ಕೊಡಬಾಗಿದೆ ಎಂದು ತಿಳಿಸಿದರು. "Examination fee and II Term fee for the academic year 1972–73 is exempted" ಎಂದು ಅವರು ಹೇಳಿದ್ದಾರೆ. ಅಕ್ಟೋಬರ್-ನವೆಂಬರಿನಲ್ಲಿ ರಾಬಿ ಬೆಳೆ ಬಿತ್ತನೆ ಮಾಡಲು ಸಾಧ್ಯವಾಗದಿದ್ದುದನ್ನು ನೋಡಿ ಶ್ರೀ ಶಿವಣ್ಣನವರು ಫೀಜಿನ ಬಗ್ಗೆ ಏನಾಯಿತಿ ತೋರಿಸಿರುವುದಾಗಿ ಹೇಳಿದ್ದಲ್ಲದೆ "Boarding arrangements for the poor and deserving students shou'd immediately be taken up" ಅನ್ನುವ ಮಾತನ್ನೂ ಹೇಳಿದ್ದಾರೆ. ಆದರೆ ಶ್ರೀ ಶಿವಣ್ಣನವರು ಒತ್ತಾಯದಿಂದ ಹೀಗೆ ಹೇಳಿದ್ದಾರೆಂದು ಹೇಳಬಹುದು. ಅವರ ಒತ್ತಾಯದಿಂದ ಹಾಗೆ ಹೇಳುವವರಲ್ಲ. ಅವರು ಪರಿಸ್ಥಿತಿ ನೋಡಿ ಪರಿಸ್ಥಿತಿಯ ಉಲ್ಬಣತೆಯನ್ನು ಕಂಡು ವಿದ್ಯಾರ್ಥಿಗಳಿಗೆ ಸೂಕ್ತವಾದ ಪರಿಹಾರ ಸಿಕ್ಕಲೇಬೇಕು, ಸಿಕ್ಕಬೇಕಾದುದು ನ್ಯಾಯ ಎಂದುಯೋಚಿಸಿ ಹಾಗೆ ಮಾಡಿದ್ದಾರೆ. ಇದನ್ನು ಅವರ ಬಗ್ಗೆ ಹೆಮ್ಮೆಯಿಂದ ನಾನು ಹೇಳುತ್ತಿದ್ದೇನೆ. ಅವರು ಹೆದರಿ ಆ ರೀತಿ ಮಾಡುವವರಲ್ಲ. ಅವರನ್ನು ರಾಜಕೀಯಕ್ಕೆ ತಳ್ಳಿದವನು ನಾನು. ಸರಕಾರಕ್ಕೆ ಹಿಂದಿನಿಂದ ಇರುವ ಕಷ್ಟವನ್ನು ತಿಳಿಸಿದಾಗಲೆಲ್ಲಾ ಪರಿಶೀಲಿಸೋಣ, ಆಲೋಚನೆ ಮಾಡೋಣ ಎಂದು ಹೇಳುತ್ತಿದ್ದರು, ಹೀಗೆಯೇ ಮುಂದುವರೆಸುತ್ತಿದ್ದರು. ಮೊನ್ನೆ ಪತ್ರಿಕೆಯಲ್ಲಿ ಶ್ರೀ ಶಿವಣ್ಣನವರಿಗೂ ಮತ್ತು ಶ್ರೀ ದೇವೇಂದ್ರಪ್ಪನವರಿಗೂ ಈ ಬಗ್ಗೆ ಸಂಪೂರ್ಣ ಅಧಿಕಾರ ಕೊಟ್ಟಿದ್ದಾರೆಂದು ವರದಿಯಾಗಿತ್ತು. ಹಾಗಿರುವಾಗ ಇದರ ಸಂಪೂರ್ಣ ಜವಾಬ್ದಾರಿ ಸರಕಾರದ ಮೇಲಿದೆ. ಇದನ್ನು ಸರಕಾರನಿರ್ವಹಿಸಬೇಕು. ಹಾಗೆ ಮಾಡದಿದ್ದರೆ ಶ್ರೀ ಶಿವಣ್ಣನವರು ರಾಜೀನಾಮೆ ಕೊಡಬೇಕು, ಸರಕಾರ ಅವನು ತಮ್ಮ ಅಧಿಕಾರ ಏನಾ ಪ್ರಯೋಗಿಸಿದ್ದರೆ ಅವರನ್ನು ತೆಗೆದುಹಾಕಬೇಕು. ಸಂವಿಧಾನದ ಪ್ರಕಾರ ಹಾಗೆ ಮಾಡಬೇಕು. ಕ್ಷಾಮ ಪರಿಸ್ಥಿತಿಯ ಹೆಸರಿನಿಂದ ವಿದ್ಯಾರ್ಥಿಗಳಿಗೆ ಗರಾಟೆ ಮಾಡಬೇಕಾಯ್ತು. ಪೋಲೀಸರು ಲಾಠಿ ಛಾರ್ಜ್ ಮಾಡಿದರು. ಇದರಲ್ಲಿ ವಿದ್ಯಾರ್ಥಿಗಳ

(ಶ್ರೀ ವಿಶ್ವನಾಥರೆಡ್ಡಿ)

ತಪ್ಪಿಲ್ಲ. ಈ ಬಗ್ಗೆ ಜುಡಿಷಿಯಲ್ ಎನ್‌ಕ್ವೈರಿ ಮಾಡಬೇಕು. ಪೋಲೀಸರು ತಪ್ಪು ಮಾಡಲು ಕಾರಣವೇನು ? ಮಂತ್ರಿಗಳು ಸರಿಯಾಗಿ ವರ್ತಿಸಿಲ್ಲ, ಸರಕಾರ ಸರಿಯಾಗಿ ನೂಕ್ತ ಕ್ರಮ ಸಕಾಲದಲ್ಲಿ ತೆಗೆದುಕೊಳ್ಳದೆ ಇಂಥ ಪರಿಸ್ಥಿತಿ ಬಂದಿದೆ. ಮುಂದೆ ಕ್ಷಾಮ ಪರಿಸ್ಥಿತಿ ಬಗ್ಗೆ ಹೇಳ ಬಹುದು. ಜನರು ಅಲ್ಲಿ ಗುಳೆ ಹೋಗುತ್ತಿದ್ದಾರೆ, ಇದು ಪತ್ರಿಕೆಯಲ್ಲೂ ಬರುತ್ತಿದೆ. ಯಾದಗಿರಿ ತಾಲ್ಲೂಕಿನಿಂದ ಇಂದು 40 ಜನರು ತಮ್ಮ ಎತ್ತುಗಳನ್ನು ಮಾರಿ ಧಾರ್ವಾಡಗೆ ದುಡ್ಡನ್ನೊದಗಿಸಿಕೊಂಡು ಇಲ್ಲಿಗೆ ಬಂದಿದ್ದಾರೆ. ಫೀಜಿನ ವಿನಾಯಿತಿ ಆಗಬೇಕು, ವಿದ್ಯಾರ್ಥಿಗಳಿಗೆ ಊಟದ ವ್ಯವಸ್ಥೆ ಆಗಬೇಕು, ಜುಡಿಷಿಯಲ್ ಎನ್‌ಕ್ವೈರಿ ಆಗಬೇಕು ಎಂದು ನಿವೇದನೆ ಮಾಡುತ್ತೇನೆ.

† ಶ್ರೀ ಎಸ್. ಬಂಗಾರಪ್ಪ (ಸೊರಬ).—ಸಭೆಯ ಮುಂದಿರುವ ನಿಲುವಳಿ ಸೂಚನೆಯನ್ನು ಸಮರ್ಥಿಸಿ ನಾನು ಒಂದು ವಿಷಯ ಹೇಳುತ್ತೇನೆ. ಈಗ ತಾನೆ ಮಾನ್ಯ ಸದಸ್ಯರು ಹೇಳಿರುವು ದನ್ನು ನಾನು ಪುನರುಚ್ಚಾರ ಮಾಡುವುದಿಲ್ಲ. ಈಗ ಮಾನ್ಯ ರಾಜ್ಯ ಸಚಿವರಾದ ಶ್ರೀ ಶಿವಣ್ಣ ನವರು ಆರ್ಡರು ಮಾಡಿರುವುದು ಮೆಚ್ಚಬೇಕಾದ ಅಂಶ.

ಅವರು ಹೇಳಿದ ಮಾತುಗಳಿಗಾಗಿ ನಾವು ಅವರನ್ನು ಮೆಚ್ಚಬೇಕು. ಆಲ್ಲ ವಿದ್ಯಾರ್ಥಿಗಳ ಕಷ್ಟಕಾರ್ಪಣ್ಯಗಳನ್ನು ಅವರು ನೋಡಿ ಆ ಒಂದು ಆಜ್ಞೆಯನ್ನು ಆ ಮಾನ್ಯ ಸಚಿವರು ಹೊರಡಿ ಸಿದ್ದಾರೆ. ಹಾಗೆ ಅವರು ಹೊರಡಿಸಿದ ಆಜ್ಞೆಯನ್ನು ಜಾರಿಗೆ ಕೊಡತಕ್ಕದ್ದು ಅಲ್ಲರತಕ್ಕ ಅಧಿಕಾರಿ ಗಳ ಆದ್ಯ ಕರ್ತವ್ಯ. ಆದರೆ ಆ ಆಜ್ಞೆಯನ್ನು ಇಲ್ಲಿಯವರೆಗೆ ಆ ಅಧಿಕಾರಿಗಳು ಜಾರಿಗೆ ತಂದಿದ್ದಾ ರೆಯೇ ಅಥವಾ ಇಲ್ಲವೇ ಎಂಬುದನ್ನು ನಾವೀಗ ಪರಿಶೀಲಿಸಿ ನೋಡಬೇಕಾಗಿದೆ. ಹಾಗೊಂದುವೇಳೆ ಅವರು ಆದನ್ನು ಜಾರಿಗೆ ಕೊಡದೆ ಇದ್ದರೆ ಅದರ ಬಗ್ಗೆ ವಿಚಾರಣೆಯಾಗಬೇಕು ಮತ್ತು ಆ ಅಧಿಕಾರಿ ಗಳಿಗೆ ತಕ್ಕ ಶಿಕ್ಷೆಯಾಗಬೇಕು. ಆದರೆ ಈಗಾಗಲೇ ಮಾನ್ಯ ಮುಖ್ಯಮಂತ್ರಿಗಳು ಸಭೆಯನ್ನು ಬಿಟ್ಟು ಹೊರಗಡೆಗೆ ಹೋದರು ಅವರು ಇಲ್ಲಲ್ಲ. ಆದರೆ ನಾನು ಕೇಳುತ್ತಿರುವುದು ಸರ್ಕಾರ ದವರು ಈಗಲೇ ಈ ಸದನಕ್ಕೆ ಒಂದು ವಿಷಯವನ್ನು ತಿಳಿಸಬೇಕು-ಅದೇನೆಂದರೆ, ವಿದ್ಯಾರ್ಥಿಗಳಿಗೆ ಫೀಜನ್ನು ಮನ್ನಾ ಮಾಡತಕ್ಕ ವಿಚಾರದಲ್ಲಿ ಆ ದಿವನ ಅಲ್ಲಿ ಶ್ರೀ ಶಿವಣ್ಣನವರು ಏನೇ ಹೇಳಿರಲ, ಅಥವಾ ಶ್ರೀ ರಾಥೋಡ್ ರವರೇ ಹೇಳಿರಲಿ ಅಥವಾ ಶ್ರೀ ಎಚ್. ಎಂ. ಚನ್ನಬಸಪ್ಪನವರೇ ಹೇಳಿರಲಿ ಆ ವಿಚಾರದಲ್ಲಿ ಮತ್ತೆ ಈ ದಿವನ ಈ ಘಳಿಗೆಯಲ್ಲೇ ಸರ್ಕಾರದವರ ಧೋರಣೆ ಏನೆದೆ ಅನ್ನತಕ್ಕ ಬಗ್ಗೆ ಒಂದು ಹೇಳಿಕೆಯನ್ನು ಕೊಟ್ಟೇ ತೀರಬೇಕೆಂದು ನಾನು ಅಗ್ರಹಪೂರ್ವಕವಾಗಿ ಅಧ್ಯಕ್ಷರ ಮೂಲಕ ಸರ್ಕಾರಕ್ಕೆ ವಿನಂತಿಮಾಡಿಕೊಳ್ಳುತ್ತೇನೆ. ಆ ಹೈದ್ರಾಬಾದ್ ಕರ್ನಾಟಕದ ಬಿದರ್ ಜಿಲ್ಲೆಯ ವಿದ್ಯಾರ್ಥಿಗಳು ಯಾವ ಫೀಜನ್ನೂ ಕೊಡಬೇಕಾದ್ದಿಲ್ಲ ಸರ್ಕಾರದವರು ಅದನ್ನು ಮನ್ನಾ ಮಾಡಿ ದ್ದಾರೆಂದು ಈ ಕೂಡಲೇ ಘೋಷಣೆ ಹೊರಡಿಸಬೇಕು. ಇದು ನನ್ನ ಅಗ್ರಹಪೂರ್ವ ಕವಾದ ಬೇಡಿಕೆ. ಅಲ್ಲಿಯ ಪರಿಸ್ಥಿತಿ ಬಹಳಗಂಭೀರವಾಗಿದೆ ಎಂಬುದನ್ನು ಸರ್ಕಾರದವರೂ ಕೂಡ ನಿರ್ವಿವಾದವಾಗಿ ಒಪ್ಪಿದ್ದಾರೆ. ಅದಕ್ಕಾಗಿ ಅಲ್ಲಿಗೆ ಈಗಾಗಲೇ ಅನೇಕ ಮಂತ್ರಿಗಳು ಹೋಗಿ ಪರಿಸ್ಥಿತಿಯನ್ನು ಕಣ್ಣಾರೆ ನೋಡಿಕೊಂಡು ಬಂದಿದ್ದಾರೆ. ಹಾಗೆ ಅಷ್ಟೊಂದು ಜನ ಮಂತ್ರಿಗಳು ಅಲ್ಲಿಗೆ ಹೋಗಿ ಅಲ್ಲಿಯ ಪರಿಸ್ಥಿತಿಯನ್ನು ನೋಡಿ ಅಲ್ಲಿನ ವಿದ್ಯಾರ್ಥಿಗಳಿಗೆ ಇವರೇನು ಪರಿಹಾರಕೊಟ್ಟರು ಹಾಗೆ ಇವರು ಆವರಿಗೇನೂ ಪರಿಹಾರ ಕೊಡುವುದಕ್ಕೆ ಚೈತನ್ಯವಿಲ್ಲದಿದ್ದರೆ ಇವರೆಲ್ಲಾ ಅಲ್ಲಗೇತಕೆ ಹೇಗೆ ಹೋದರೂ ? ಇವರೇನು ಟಿ. ಎ. ಮತ್ತು ಡಿ. ಎ. ಆಸೆಗಾಗಿ ಹೋಗಿ ದ್ದರೇ ? ಜವಾಬ್ದಾರಿ ಸ್ಥಾನದಲ್ಲರತಕ್ಕ ಮಂತ್ರಿಗಳು ಒಂದು ಮಾತನ್ನು ಹೇಳಿದ ಮೇಲೆ ಅದಕ್ಕೆ ಬೆಲೆ ಇಲ್ಲ ಎಂದರೆ ಏನರ್ಥ ?

ಈಗಾಗಲೇ ಅದೇ ಕ್ಷಾಮಪೀಡಿತ ಪ್ರದೇಶದಿಂದ ಚಿಕ್ಕ ಚಿಕ್ಕ ಎಳೆಯ ಮಕ್ಕಳನ್ನು ಎತ್ತಿಕೊಂಡು ಹೊಟ್ಟೆಗಿಲ್ಲದ ಅನೇಕ ಜನ ಹೆಂಗಸರೂ ಮತ್ತು ಗಂಡಸರೂ ಅವರ ಜೀವನಕ್ಕೆ ಒಂದು ದುಡಿಮೆ ಯನ್ನು ತೋರಿಸಿ ಎಂದು ಕೇಳುವುದಕ್ಕಾಗಿ ಇಲ್ಲಿಗೆ ಬಂದು ಈ ಆಫೀಸಿನ ಬಳಿ ಕಾದಿದ್ದಾರೆ. ಜೀವನಕ್ಕೆ ದುಡಿಯುವುದಕ್ಕೆ ಒಂದು ಟಿಕಾಣೆಯನ್ನು ಸರ್ಕಾರದವರು ತೋರಿಸಲೇಬೇಕು. ಅದರ ಬಗ್ಗೆ ಸರ್ಕಾರದವರ ಧೋರಣೆ ಏನೆಂಬುದನ್ನು ಅವರು ಈಗಲೇ ಈ ಸದನದಲ್ಲಿ ಘೋಷಿಸಬೇಕು. ಈ ವಿಚಾರದಲ್ಲಿ ಸರ್ಕಾರದವರು ಒಂದು ಹೇಳಿಕೆಯನ್ನು ಕೂಡಲೇ ಕೊಡಲೇಬೇಕೆಂದು ಒತ್ತಾಯ ಮಾಡುತ್ತಾನೆ. ಅವರು ತಮ್ಮ ಮೈಯಲ್ಲಿ ದೇವರು ಶಕ್ತಿಕೊಟ್ಟಿರುವ ತನಕ ದುಡಿಯಬೇಕು—ದುಡಿಯುವುದಕ್ಕೆ ಒಂದು ಟಿಕಾಣೆಯನ್ನು ತೋರಿಸಿ ಎಂದು ಕೇಳುವುದಕ್ಕೆ ಆ ಹೆಣ್ಣುಮಕ್ಕಳು ಮಕ್ಕಳನ್ನು ಎತ್ತಿಕೊಂಡು ನೂರಾರು ಮೈಲಿಗಳಿಂದ ಇಲ್ಲಿಗೆ ಬಂದಿದ್ದಾರೆ. ಈಗ ಸಭೆಯಲ್ಲ ನಾನು ಶ್ರೀ ವಾಜಪೇಯಿಯವರ ಭಾಷೆಯಲ್ಲಿ ಹೇಳುವುದಾದರೆ ಅನೇಕ ಮಹಾ ಮಹಾಶಯರು ಅಂದರೆ

ಶ್ರೀಮಾನ್ ಚನ್ನಬಸಪ್ಪನವರು, ಶ್ರೀಮಾನ್ ಘೋರ್ಪಡೆ ಸಾಹೇಬರೂ, ಇನ್ನೂ ಅನೇಕರಿದ್ದಾರೆ ಅಜನರಿಗೆ ತಮ್ಮ ಭಾಷಣಗಳಿಂದ ಹೊಟ್ಟೆತುಂಬುವುದಿಲ್ಲ, ಅವರಿಗೆ ಹೊಟ್ಟೆಗೆ ಆಹಾರ ಸಿಕ್ಕಲು ಮೊದಲು ಕೆಲಸ ಕೊಡಿ. ಅದಕ್ಕೆ ಒಂದು ಅವಕಾಶ ಮಾಡಿಕೊಡಿ ಎಂದು ಒತ್ತಾಯ ಮಾಡಿ ಕೇಳುತ್ತಿದ್ದೇನೆ.

ಇನ್ನು ವಿದ್ಯಾರ್ಥಿಗಳ ಬಗ್ಗೆ ಲಾಠಿಪ್ರಹಾರ ಮಾಡಿದ್ದಕ್ಕೆ ಒಂದು ನ್ಯಾಯಾಂಗ ವಿಚಾರಣೆ ಆಗಲೇಬೇಕು ಎಂದು ಒತ್ತಾಯ ಮಾಡುತ್ತೇನೆ. ಹಾಗೊಂದುವೇಳೆ ಆ ವಿದ್ಯಾರ್ಥಿಗಳು ಮುಂತ್ರಿಗಳ ಕಾರಿಗೆ ಒಂದು ಕಲ್ಲನ್ನು ಎಸೆದಿದ್ದರೆ ಏನಾಗುತ್ತಿತ್ತು? ಒಂದು ಗಾಜು ಒಡೆದು ಹೋಗುತ್ತಿತ್ತು ಅಷ್ಟು ತಾನೇ! ಅಷ್ಟಕ್ಕೇ ಪೋಲೀಸಿನವರು ಒಳಗೆ ನುಗ್ಗಿ ಮಕ್ಕಳನ್ನು ಹೊಡೆದದ್ದು ಸರಿಯಾದ್ದಲ್ಲ. ಇಷ್ಟಕ್ಕೆಲ್ಲಾ ಶ್ರೀ ಕೆ. ಎಚ್. ಪಾಟೀಲರು ಅವಕಾಶ ಕೊಡಬಾರದಾಗಿತ್ತು. ಇದರ ಬಗ್ಗೆ ಅವರು ಸಾಕಷ್ಟು ಆಸಕ್ತಿಯನ್ನು ವಹಿಸಲಿಲ್ಲ. ಆದ್ದರಿಂದ ಈ ಪ್ರಕರಣದ ಬಗ್ಗೆ ಚರ್ಚೆಗೆ ಅವಕಾಶಮಾಡಿ ಕೊಡಬೇಕೆಂದು ನಾನು ಆಗ್ರಹಪೂರ್ವಕವಾಗಿ ಪ್ರಾರ್ಥಿಸುತ್ತೇನೆ.

ಅಧ್ಯಕ್ಷರು.—ಮಾನ್ಯ ಬಂಗಾರಪ್ಪನವರು ಹಿಂದೆ ಮಾತನಾಡಿದ ಮಾನ್ಯ ಸದಸ್ಯರು ಹೇಳಿದ್ದನ್ನು ತಾವು ಪುನರುಚ್ಚಾರಣೆ ಮಾಡುವುದಿಲ್ಲ ಎಂದು ಹೇಳಿ ಹಿಂದಿನವರು ಏನು ಹೇಳಿದ್ದರೋ ಅದನ್ನೇ ಅವರೂ ಕೂಡ ಪುನರುಚ್ಚಾರಣೆ ಮಾಡಿದ್ದೆ ಅವರು ಭಾಷಣದ ಒಂದು ವಿಶೇಷ. ಆದರೆ ಈ ವಿಚಾರದಲ್ಲಿ ಸರ್ಕಾರದವರು ಏನು ಹೇಳುತ್ತಾರೆಂಬುದನ್ನು ಕೇಳುವುದು ಬೇಡವೇ?

ಶ್ರೀ ಎಸ್. ಬಂಗಾರಪ್ಪ.—ಹಿಂದೆ ಅವರಿಗೆ ಪರಿಹಾರವನ್ನು ಕೊಡದಿದ್ದರೆ ಈಗಲಾದರೂ ಈ ಕೂಡಲೆ ಈಗಲೇ ಅದನ್ನು ಸಭೆಯಲ್ಲಿ ಘೋಷಣೆ ಮಾಡಿ ಎಂದು ಹೇಳಿದೆ.

Sri H. M. CHANNABASAPPA (Minister for Public Works and Electricity).—The point of order is only this. I have no objection for the Hon'ble Members to express their views on various matters. While they have a right to do so, we too have a right to have our say in regard to the steps taken to solve the problems. The adjournment motion, as it stands, Madam, seeks to discuss the grave situation arising out of the police excesses. That is one aspect.

And there is yet another thing, namely, Fee exemption to students in famine-stricken areas.

These are two issues that are adumbrated in this adjournment motion.

There is yet another issue that is being discussed. That is, drought conditions and consequences of drought conditions. We are aware that the Hon'ble Minister for Revenue has a motion to make on the scarcity conditions in certain areas of the State. So, there is ample opportunity for the hon'ble members to express their views on that subject. And we will also tell the country what we have done and what we propose to do and what is the actual position.

Now the question under discussion is about the admissibility of this adjournment motion. It has limited scope. The scope of the discussion should be limited only to the admissibility of this adjournment motion. As it stands, on the very face of it, under Rule 50 an adjournment motion can be discussed on only one matter and two or three matters cannot be clubbed together for discussion of an adjournment motion. If it is an adjournment motion in regard to the Police excesses, well, it is for the Speaker to admit or not to admit it. As the adjournment motion stands, Madam, two issues are clubbed together.

ಶ್ರೀ ವಾಟಾಳ್ ನಾಗರಾಜ್.—ಸ್ವಾಮಿ, ಅಲ್ಲೇ ಬರಗಾಲ ಬಂದಿರುವುದು, ಅಲ್ಲೇ ಜನರು ಸತ್ತಿರುವುದು, ಅಲ್ಲೇ ವಿದ್ಯಾರ್ಥಿಗಳ ಲಾಠೀ ಪ್ರಹಾರ ಪ್ರಕರಣ ನಡೆದಿರುವುದು.....

Sri H. M. CHANNABASAPPA.—I have absolutely no objection for the discussion to go on to any length on varicus matters. But I am only drawing the attention of the hon'ble members and the Hon'ble Speaker to the Rules of Procedure. I have no objection for any adjournment motion on these several subjects that may be worrying the heads of members. We will sit together and discuss them. But as things stand, we are all guided by Rules. Now what is going on all these 1½ hours or 2 hours is actual discussion on the adjournment motion which has two issues clubbed together and not on its admissibility.

Sri C. M. ARUMUGAM.—Now under the guise of raising a point of order, the Hon'ble Minister himself is discussing the adjournment motion. What is his point of order? On the other hand, I have a point of order. In a point of order, there cannot be a discussion or argument. The point of order must be specific.

Sri H. M. CHANNABASAPPA.—Hon'ble Member Sri Arumugam is a very well trained parliamentarian. I am very much surprised when such a well-trained and experienced parliamentarian stands up and raises a point of order when I am on my legs. Is it fair?

I would only put it this way. Two matters are clubbed together. One is Police excesses. I have no objection for its discussion. The other issue is fees exempton. These two are separate subjects. I have no objection for that matter also being taken up. But both matters clubbed together cannot form an adjournment motion under Rule 50. I have no objection for two separate adjournment motions being brought and discussed if the Speaker permits. My submission, therefore, is that this adjournment motion as it stands is not in order. In the guise of discussing the admissibility of an adjournment motion, the adjournment motion itself cannot be discussed. This is my point of order.

Sri M. S. KRISHNAN.—Madam Speaker, the adjournment motion which we have given is very specified and it speaks only of the law and order situation and we would like you to see that this is taken up immediately. If the Law and order situation is taken up, then other things can be discussed.

4.30 P.M.

Sri T. R. SHAMANNA.—Madam, I am a party to drafting that adjournment motion. I may say here that the police excesses are on account of the student agitation. The poor students asked for some relief and they were harassed and beaten. Is it right to harass and beat the students who asked for some relief in payment in fees?

That is the very matter that is sought to be discussed through this adjournment motion. There is no question of mixing up two points here.

Madam SPEAKER.—The two are inter-connected. So I thought both could be taken up.

Sri K. H. PATIL (Minister for Agriculture and Forest).—On a point of order, Madam Speaker .....

Sri V. N. PATIL.—You were kind enough to say something in the meanwhile the Hon'ble Minister is interrupting.

Sri K. H. PATIL.—When the Speaker is about to give a ruling, every Member has a right to point out what he feels right.

Sri C. M. ARUMUGAM.—The point is, when the Speaker gives a ruling, that binds all-both sides of the House. No member can question the authority of the Speaker.

Sri K. H. PATIL.—I am not questioning the Ruling of the Chair. My point of order is that before hearing the Government views on the issue of admissibility, the Speaker cannot come to a decision. This is a point of order.

Sri C. M. ARUMUGAM.—I am not going to agree to it because you say you are raising a point of order after the Speaker's ruling. There cannot be a point of order after the Speaker's ruling. The whole matter is settled when the Speaker gives a ruling and there is a vacuum and there cannot be any point of order in a vacuum.

Madam SPEAKER.—I have not yet given any ruling on the admissibility. I said I wanted to hear the Government on the subject. Why do you treat it as a ruling? I may rule it out afterwards. I only said I will just consider whether we can take up the adjournment motion. Why do you take it as a ruling?

Sri C. M. ARUMUGAM.—Is it correct to raise a point of order after the ruling is given by the Speaker? When the Speaker gives the ruling ordinarily the matter is settled. And unless another member raises another subject, there will be a vacuum and there cannot be a point of order.

Sri D. DEVARAJ URS.—I think the Speaker should carefully mark the words of Sri C. M. Arumugam, because whenever the Hon'ble member departs from the principles laid down by himself, we will have to point out. I think the Hon'ble Minister is not raising actually a point of order. Whatever he wants to submit, I hope the Hon'ble Member will allow him to submit.

Sri C. M. ARUMUGAM.—Certainly Sir, I will allow. But not on a point of order on Speaker's ruling.

Sri K. H. PATIL.—With all due respect Sir, it is a point of order and it is intended to enlighten the Speaker on a procedure that has been carried out, up till now. Madam Speaker, with great respect, I say I am not questioning the ruling of the Speaker.

Sri K. H. PATIL.—With all due respect Sir, it is a point of question the ruling of the Speaker.

Sri K. H. PATIL.—I am of the opinion that the Hon'ble Speaker has not given any decision so far.

Sri K. H. PATIL.—If the Hon'ble Members do not want to hear me, I will sit down.

Sri C. M. ARUMUGAM.—When the Leader of the House says that it is not a point of order, he still insists that it is a point of order.

ಶ್ರೀ ಪಾಟೀಲ್ ನಾಗರಾಜ್.—ಈಗ ಈ ನಿಲುವಳಿ ಸೂಚನೆ ಏನಿದೆ ಅದನ್ನು ಅಲ್ಲಾ ಮಾಡಿದ್ದೀರಾ, ಇಲ್ಲವೇ ಎಂಬುದು ಒಂದನೆಯ ವಿಷಯ. ನೀವು ಚರ್ಚೆಗೆ ಏನೂ ಅವಕಾಶ ಕೊಟ್ಟಿಲ್ಲ. ಆದ್ದರಿಂದ ಅದಕ್ಕೆ ಮುಂಚೆ ಅವರು ಹೇಳಿಕೆ ಕೊಡುವುದಾದರೂ ಹೇಗೆ?

†ಶ್ರೀ ಕೋಣಂದೂರು ಲಿಂಗಪ್ಪ (ತೀರ್ಥಹಳ್ಳಿ).—ಮಾನ್ಯ ಮುಖ್ಯಮಂತ್ರಿಯವರು ಹೇಳಿಕೆ ಕೊಡುವುದಕ್ಕೆ ಮುಂಚೆ ನಾನು ಯಾರೂ ಹೇಳದ ಕೆಲವು ಅಂಶಗಳನ್ನು ಹೇಳಲಿಚ್ಚಿಸುತ್ತೇನೆ. ಈ ಪಾಪದ ಕೆಲಸಕ್ಕೆ ಬರೇ (ಆರ್) ಕಾಂಗ್ರೆಸ್ ಜವಾಬ್ದಾರಿಯಲ್ಲ; ಇದಕ್ಕೆ ಹಿಂದೆ ಇದ್ದಂತಹ ಕಾಂಗ್ರೆಸ್ ಸಹ ಜವಾಬ್ದಾರಿಯಾಗಿದೆ. ಈ ಕಾಂಗ್ರೆಸ್ ಇಬ್ಭಾಗವಾಗುವ ಮೊದಲಿನಿಂದಲೂ ಪಾಪದ ಕೆಲಸವನ್ನು ಮಾಡಿಕೊಂಡು ಬರುತ್ತಿದ್ದಾರೆ. ಇವರು 25 ವರ್ಷಗಳಿಂದ ವಿದ್ಯಾರ್ಥಿಗಳ ಮೇಲೆ ಲಾಠಿ ಪ್ರಹಾರ ಮಾಡಿಕೊಂಡು, ದಬ್ಬಾಳಿಕೆ ಮಾಡಿಕೊಂಡು ಬಂದಿದ್ದಾರೆ. ಹಿಂದೆ ಮಾನ್ಯ ಕಂಠಿಯವರು ಮತ್ತು ನಿಜಲಿಂಗಪ್ಪನವರು ಮುಖ್ಯಮಂತ್ರಿಯಾಗಿದ್ದಾಗಲೂ ಬೆಂಗಳೂರಿನಲ್ಲಿ ವಿದ್ಯಾರ್ಥಿಗಳು ಫೀಸ್ ಕಡಿಮೆ ಮಾಡಿ ಎಂದು ಹೇಳಿದಾಗ ನಮಗೆ ಲಾಠಿ ಏಟು ಕೊಟ್ಟರು. ಇವೊತ್ತಿನ ದಿವಸ ಗುಲ್ಬರ್ಗದಲ್ಲಿ ವಿದ್ಯಾರ್ಥಿಗಳ ಮೇಲೆ ಲಾಠಿ ಏಟು ಬಿದ್ದಿದೆ. ಈ ರೀತಿ ನೆಹರೂ ಕಾಲದಿಂದ ಇಂದಿರಾ ಗಾಂಧಿಯವರ ಕಾಲದವರೆಗೂ ವಿದ್ಯಾರ್ಥಿಗಳ ಮೇಲೆ ಗೋಳೀಬಾರು ಮತ್ತು ಲಾಠಿ ಪ್ರಹಾರ ಮಾಡಿಕೊಂಡೇ ಬಂದಿದ್ದಾರೆ ಈ ಕಾಂಗ್ರೆಸ್ಸಿನವರು. ಇವತ್ತು ವಿದ್ಯಾರ್ಥಿಗಳಿಗೆ ಆಗತಕ್ಕ ಅನ್ಯಾಯಗಳನ್ನು ತಡೆಯುವುದಕ್ಕೆ ಮತ್ತು ಪ್ರತಿಭಟನೆ ಮಾಡುವುದಕ್ಕೆ ಇರತಕ್ಕ ಹಕ್ಕನ್ನು ದಮನ ಮಾಡುವುದಕ್ಕೆ ಈ ಸರ್ಕಾರ ಪ್ರಯತ್ನ ಮಾಡುತ್ತಿದೆ. ಇದು ಇವರ ಪೂರ್ವಜರಿಂದಲೂ ನಡೆದುಕೊಂಡು ಬಂದಿದೆ. ಇದನ್ನು ಪರಿಹಾರ ಮಾಡುವುದಕ್ಕೆ ಮತ್ತು ಇದರ ಬಗ್ಗೆ ಚಳವಳಿ ಮಾಡುವುದಕ್ಕೆ ನಮ್ಮ ಸೋಶಿಯಲಿಸ್ಟ್ (ಲೋಹಿಯಾ) ಪಕ್ಷವು ತಯಾರಾಗಿದೆ. ಇವತ್ತು ಕ್ಷಾಮದ ಬಗ್ಗೆ ಕೇವಲ ಚನ್ನಬಸಪ್ಪನವರಿಗೆ ಮತ್ತು ಹೆಗಡೆಯವರಿಗೆ, ಅರಸರಿಗೆ ಮತ್ತು ದೇವೇಗೌಡರಿಗೆ—ಹೀಗೆ ವಾಗ್ವಾದ ನಡೆಯುತ್ತಾ ಹೋದರೆ ಜನರು ಈ ರಾಜ್ಯವು ಇವರಿಬ್ಬರಿಂದಲೆ ನಡೆಯುತ್ತಾ ಇದೆಯೆಂದು ತಿಳಿದುಕೊಳ್ಳಬೇಕಾಗುತ್ತದೆ. ಮತ್ತು ಜನರಲ್ಲಿ ಆ ಒಂದು ಭ್ರಮೆ ಉಂಟಾಗುತ್ತವೆ. ಅನ್ಯಾಯಗಳ ವಿರುದ್ಧ ವಿದ್ಯಾರ್ಥಿಗಳು ಮತ್ತು ಕಾರ್ಮಿಕರು ಅಹಿಂಸಾತ್ಮಕವಾದ ಚಳವಳಿ ಮಾಡಿದರೆ ಅದನ್ನು ಹತ್ತಿಕ್ಕಲು ಸರ್ಕಾರ ಹಾಕಿಕೊಂಡ ನೀತಿ ಏನಿದೆ ಅದನ್ನು ವಿಮರ್ಶೆ ಮಾಡುವ ಉದ್ದೇಶದಿಂದ ಈ ನಿಲುವಳಿ ಸೂಚನೆಯನ್ನು ಒಪ್ಪಿಕೊಳ್ಳಬೇಕೆಂದು ಹೇಳುತ್ತೇನೆ. ಅದೇ ರೀತಿ ಈ ಫೀಸ್ ಬಗ್ಗೆಯೂ ಮಾಫಿ ಮಾಡಬೇಕು. ಸರ್ಕಾರ ಏನೊಂದು ಘೋಷಣೆಯನ್ನು ಹಿಂದೆ ಮಾಡಿದ್ದಾರೆ, ಅದನ್ನು ಕಾರ್ಯರೂಪಕ್ಕೆ ತರುವ ದೃಷ್ಟಿಯಿಂದ ಮತ್ತು ಕ್ಷಾಮ ಪೀಡಿತ ಪ್ರದೇಶದಲ್ಲಿರುವ ವಿದ್ಯಾರ್ಥಿಗಳಿಗೆ ಫೀಯನ್ನು ಮಾಫಿ ಮಾಡುವ ದೃಷ್ಟಿಯಿಂದ ಈ ನಿಲುವಳಿ ಸೂಚನೆಯನ್ನು ಚರ್ಚೆಗೆ ತಗೆದುಕೊಳ್ಳುವುದಕ್ಕೆ ಅನುಮತಿ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

†ಶ್ರೀ ಡಿ. ದೇವರಾಜ ಅರಸ್.—ಮಾನ್ಯ ಅಧ್ಯಕ್ಷರೆ, ನಮ್ಮ ಮುಂದಿರತಕ್ಕ ಎರಡು ನಿಲುವಳಿ ಸೂಚನೆಗಳ ಬಗ್ಗೆ ಅವಕಾಶ ಕೊಡಬೇಕೇ ಬೇಡವೇ ಎನ್ನುವುದರ ಬಗ್ಗೆ ಸರ್ಕಾರದ ವತಿಯಿಂದ ಏನು

ಹೇಳಿದ್ದಾರೆಂಬುದನ್ನು ತಾವು ಕೇಳಿದ್ದೀರೆಂದು ನಾನು ಭಾವಿಸುತ್ತೇನೆ. ಇದರ ಮೇಲೆ ಈಗಾಗಲೇ ಚರ್ಚೆ ಆಗಿಬಿಟ್ಟಿದೆ. ಆದರೂ ನಾನು ಅವರು ಹೇಳಿದಂತಹ ಫೀಸ್ ಬಗ್ಗೆ ಉತ್ತರ ಕೊಡುವುದಕ್ಕೆ ಇಷ್ಟಪಡುವುದಿಲ್ಲ. ತಾವು ಕೇಳಿರುವ ಪ್ರಶ್ನೆ ಏನಿದೆ, ಅಷ್ಟಕ್ಕೆ ಮಾತ್ರ ನನ್ನ ಹೇಳಿಕೆ ಸೀಮಿತವಾಗಿರುತ್ತದೆ. ಈಗಾಗಲೇ ಪಿ.ಡಬ್ಲ್ಯು.ಡಿ. ಮಂತ್ರಿಯವರು ಇದರ ಅಡ್ಮಿನಿಬಿಲಿಟಿಯ ಬಗ್ಗೆ ಹೇಳಿದಾಗ ತಾವು ಒಂದು ರೂಲಿಂಗ್ ಕೊಟ್ಟಿದ್ದೀರಿ. ಈ ಫೀಸ್ ವಿಚಾರ ಎರಡು ತಿಂಗಳ ಹಿಂದೆ ಬಂದಿದೆ ಈಗಲೂ ಈ ವಿಚಾರ ಬಂದಿದೆ. ಈ ವಿಚಾರದಲ್ಲಿ ನಾನು ಎರಡು-ಎರಡೂವರೆ ತಿಂಗಳ ಹಿಂದೆ ಕೇಳಿದ ವಿಚಾರವೇ ಬೇರೆ; ಈಗ ಇಲ್ಲಿ ಹೇಳತಕ್ಕಂತಹ ವಿಚಾರವೇ ಬೇರೆ. ಆಗ ಪ್ರೈವೇಟ್ ಕಾಲೇಜುಗಳಲ್ಲಿ ಫೀಸ್ ರೈಸ್ ಮಾಡಿದ್ದಾರೆ ಎನ್ನುವ ಪ್ರಶ್ನೆ ಇತ್ತು. ಹಾಗೆ ರೈಸ್ ಮಾಡಿರುವುದನ್ನು ನಾವು ಕೊಡುವುದಕ್ಕಾಗುವುದಿಲ್ಲ ಎಂದು ಬೀದರಿನಲ್ಲಿ ವಿದ್ಯಾರ್ಥಿಗಳು ಕೇಳಿದರು. ಇವೆರಡನ್ನೂ ಮಾನ್ಯ ವಿರೋಧ ಪಕ್ಷದ ಸದಸ್ಯರು ಸ್ವಲ್ಪ ಅರ್ಥ ಮಾಡಿಕೊಳ್ಳಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಎರಡು ತಿಂಗಳ ಹಿಂದೆ ಹೇಳಿದಂತಹ ಪ್ರಶ್ನೆ ಪ್ರೈವೇಟು ಕಾಲೇಜುಗಳಲ್ಲಿ ಫೀಸ್ ರೈಸ್ ಮಾಡಿದಂತಹ ಪ್ರಶ್ನೆ. ಆಗ ಫ್ಯಾಮಿನ್ ಕಂಡಿಶನ್ ಬಗ್ಗೆ ಫೀಸ್ ಕಡಿಮೆ ಮಾಡಿ ಎಂದು ಯಾವ ಒಬ್ಬ ಶಾಸಕರಾಗಲಿ, ಅಥವಾ ಶಾಸಕೇತರರಾಗಲಿ ಯಾವ ಒಂದು ಅರ್ಜಿಯನ್ನಾಗಲಿ ಅಥವಾ ಮನವಿಯನ್ನಾಗಲಿ ಕೊಟ್ಟು ಹೇಳಿಲ್ಲ.

Sri V. N. PATIL.—I have sent a memorandum.

Sri D. DEVARAJ URS.—You have sent a memorandum but that does not refer to the famine condition *vis-a-vis* fees.

Sri S. BANGARAPPA.—The Hon'ble Chief Minister was saying just some time back that he had not received any representation from anybody and now he is saying he has received a memorandum from Sri V. N. Patil.

Sri D. DEVARAJ URS.—He has given a memorandum but that does not contain anything about fees.

ಈಗ ಮಾನ್ಯ ಸದಸ್ಯರು ಪ್ರೈವೇಟ್ ಕಾಲೇಜುಗಳಲ್ಲಿ ಏಕಾಏಕಿ ಫೀಜನ್ನು ಜಾಸ್ತಿ ಮಾಡಿದ್ದಾರೆ ಅದನ್ನು ಕಡಿಮೆ ಮಾಡಬೇಕೆಂದು ಹೇಳಿದರು. ಎಲ್ಲಾ ಕಡೆ ಕರ್ನಾಟಕ ರಾಜ್ಯ, ಮೈಸೂರು ರಾಜ್ಯದಲ್ಲಿ ಎಲ್ಲಾ ಪ್ರೈವೇಟ್ ಕಾಲೇಜುಗಳಲ್ಲಿಯೂ ಫೀಜನ್ನು ಜಾಸ್ತಿ ಮಾಡಿದ್ದಾರೆ. ಹಳೆಯ ಮೈಸೂರು ಭಾಗದಲ್ಲಿ ಎರಡು ವರ್ಷಗಳ ಹಿಂದೆಯೇ ಪ್ರೈವೇಟ್ ಕಾಲೇಜುಗಳಲ್ಲಿ ಫೀಜು ಜಾಸ್ತಿ ಮಾಡಿದ್ದಾರೆ. ಇತ್ತೀಚೆಗೆ ಕರ್ನಾಟಕ ಯೂನಿವರ್ಸಿಟಿಗೆ ಸೇರಿದಂತಹ ಪ್ರೈವೇಟ್ ಕಾಲೇಜುಗಳಲ್ಲಿಯೂ ಸಹ ಹಳೆಯ ಮೈಸೂರಿನಲ್ಲಿರತಕ್ಕ ಪ್ರೈವೇಟ್ ಕಾಲೇಜುಗಳಲ್ಲಿ ಫೀಜನ್ನು ಜಾಸ್ತಿ ಮಾಡಿರುವ ಹಾಗೆ ನಾವು ಫೀಜು ಜಾಸ್ತಿ ಮಾಡಲೇಬೇಕು ಎಂದು ಹೇಳಿದಾಗ ಅದಕ್ಕೆ ಒಂದು ಸರ್ಕಾರಿ ಆಜ್ಞೆಯನ್ನು ನಾವು ಹೊರಡಿಸಿದೆವು. ಅದರ ಪ್ರಕಾರ ಆ ಪ್ರೈವೇಟ್ ಕಾಲೇಜುಗಳವರು ಫೀಜನ್ನು ಜಾಸ್ತಿ ಮಾಡಿದರು. ಅದರ ಪರಿಣಾಮವಾಗಿ ಆ ಪ್ರೈವೇಟ್ ಕಾಲೇಜುಗಳ ವಿದ್ಯಾರ್ಥಿಗಳು ನಮಗೆ ಕಷ್ಟವಾಗಿದೆ, ಫೀಜನ್ನು ಕಡಿಮೆ ಮಾಡಬೇಕೆಂದು ನನಗೆ ಮನವಿಯನ್ನು ಕೊಟ್ಟಿದ್ದರು. ಅದನ್ನು ನೋಡುತ್ತೇನೆ ಎಂದು ನಾನು ಹೇಳಿದ್ದೆ. ಅದರ ಬಗ್ಗೆ ಪರಿಶೀಲನೆ ಮಾಡಿ ಬಡವರಿಗೆ ಫೀಜು ಕಡಿಮೆ ಮಾಡುವುದನ್ನು ನಾವು ಪರಿಶೀಲನೆ ಮಾಡಿದ್ದೇವೆ. ಈಗ ಬಂದಿರತಕ್ಕ ವಿಚಾರವೇನೆಂದರೆ ಅಭಾವ ಪರಿಸ್ಥಿತಿಯಿಂದ ನಮಗೆ ತೊಂದರೆಯಾಗಿದೆ. ಆದ್ದರಿಂದ ಎಗ್ಸಾಮಿನೇಷನ್ ಫೀಜು ಮತ್ತು ಸೆಕೆಂಡ್ ಟರ್ಮ್ ಫೀಜು ಇವುಗಳನ್ನು ಎಗ್ಸಮ್ಷನ್ ಮಾಡಿ ನಾವು ಫೀಜು ಕೊಡದ ಹಾಗೆ ಮಾಡಬೇಕೆಂದು ಅಲ್ಲಿನ ವಿದ್ಯಾರ್ಥಿಗಳು ಮಾನ್ಯ ರಾಜ್ಯ ಸಚಿವರಾದ ಶ್ರೀ ಶಿವಣ್ಣನವರು ಗುಲ್ಬರ್ಗಾಕ್ಕೆ ಹೋದಾಗ ಅವರನ್ನು ಕೇಳಿದ್ದರಂತೆ, ಇದನ್ನು ನಾನು ಪತ್ರಿಕೆಯಲ್ಲಿ ಓದಿದ್ದೇನೆ. ಈ ಎಲ್ಲಾ ವಿದ್ಯಾರ್ಥಿಗಳ ಮನವಿಗಳನ್ನೂ ನಾವು ಕ್ಯಾಬಿನೆಟ್‌ನಲ್ಲಿ ಚರ್ಚೆ ಮಾಡಿ ಈ ಬಗ್ಗೆ ಒಂದು ತೀರ್ಮಾನ ತಗೆದುಕೊಂಡು ಈ ತಿಂಗಳು 25ನೇ ತಾರೀಖು ಒಂದು ಸರ್ಕಾರಿ ಆಜ್ಞೆಯನ್ನು ಹೊರಡಿಸಿದ್ದೇವೆ. ಅದು ತಮಗೆ ಗೊತ್ತಿದೆ. ಆ ಸರ್ಕಾರಿ ಆಜ್ಞೆ ಈ ರೀತಿ ಇದೆ.

(SRI D. DEVARAJ URS)

"*Subject.*—Exemption from payment of second term fee and examination fee by the poor students of Aided Colleges and Schools in Gulbarga and Bidar Districts.

PREAMBLE

Government have taken several measures to mitigate the hardships on account of scarcity conditions in Gulbarga and Bidar Districts. The question of giving relief to school and college students has been under consideration of Government.

Order No. ED 183 *UPC* 72, *Bangalore, dated the 25th November* 1972.

Government direct that students in Arts and Science Colleges and Secondary Schools in Gulbarga and Bidar Districts whose parent'/ guardians' income is less than Rs. 500 per month be exempted from payment of second term fees and fees for examination during the current year. The quantum of the second term fees to be exempted will be only at rates prevailing in Government Institutions.

2. The expenditure for reimbursement to Aided Institutions on account of loss of fee income due to this order will be met by re-appropriation in due course."

ಇದು ಸರ್ಕಾರದವರು ಹೊರಡಿಸಿರತಕ್ಕ ಆಜ್ಞೆ. ಆದ್ದರಿಂದ ಫೀಜಿನ ವಿಚಾರ ಅಡ್ಜರ್ನ್‌ಮೆಂಟ್ ಮೋಷನ್ ಆಗುವುದಕ್ಕೆ ಸಾಧ್ಯವಿಲ್ಲ. ಮಾನ್ಯ ಸದಸ್ಯರು ಈ ಬಗ್ಗೆ ಅವರವರ ಅಭಿಪ್ರಾಯವನ್ನು ವ್ಯಕ್ತಪಡಿಸುವುದಕ್ಕೆ ಸಾಕಷ್ಟು ಅವಕಾಶ ಇದೆ. ಕ್ಷಾಮಪರಿಸ್ಥಿತಿಯ ಬಗ್ಗೆ ಮಾತನಾಡುವುದಕ್ಕೆ ಎರಡು ದಿವಸಗಳ ಕಾಲವನ್ನು ಕೊಟ್ಟಿದೆ. ಮಾನ್ಯ ಸದಸ್ಯರು ಹೇಳತಕ್ಕ ವಿಚಾರಗಳು ಏನಾದರೂ ಇದ್ದರೆ ನಾವು ಮಾಡಿರುವುದು ಸರಿ ಅಥವಾ ತಪ್ಪು ಎನ್ನುವ ವಿಚಾರದಲ್ಲಿ ಅವರ ಅಭಿಪ್ರಾಯ ಏನಿದೆ ಎಂಬುದನ್ನು ಹೇಳುವುದಕ್ಕೆ ಸಾಕಷ್ಟು ಅವಕಾಶ ಇದೆ. ಈಗ ಅಡ್ಜರ್ನಮೆಂಟ್ ಮೋಷನ್ ಒಪ್ಪಿಕೊಳ್ಳಬೇಕೇ ಅಥವಾ ಬೇಡವೇ, ಅದರ ಮೆರಿಟ್ ಮತ್ತು ಡಿಮೆರಿಟ್ ಎಷ್ಟು ಎನ್ನುವ ಬಗ್ಗೆ ನಾನು ಈಗ ಮಾತನಾಡುವುದಕ್ಕೆ ಇಷ್ಟಪಡುವುದಿಲ್ಲ. ಈ ಬಗ್ಗೆ ಅನೇಕ ಮಾನ್ಯ ಸದಸ್ಯರು ಅರಿಕೆ ಮಾಡಿದ್ದಾರೆ. ಈ ಪ್ರಶ್ನೆಗೆ ನಾನು ಉತ್ತರ ಕೊಟ್ಟುಕೊಂಡು ಹೋಗತಕ್ಕದ್ದು ಸೂಕ್ತವಲ್ಲ. ಈಗ ನನಗೆ ಅಧ್ಯಕ್ಷರು ಏನು ಹೇಳಿದ್ದಾರೆ ಆಷ್ಟಕ್ಕೆ ಮಾತ್ರ ನಾನು ಉತ್ತರವನ್ನು ಕೊಡುತ್ತೇನೆ. ಫೀಜಿನ ಬಗ್ಗೆ ನಾನು ಈಗಾಗಲೇ ಉತ್ತರವನ್ನು ಕೊಟ್ಟಿದ್ದೇನೆ.

ಇನ್ಸುರಾ ಅಂಡ್ ಆರ್ಡರ್ ಮೈಂಟಿನೆನ್ಸ್ ಮತ್ತು ರಾಶಿ ಚಾರ್ಜ್ ವಿಚಾರ. ಈ ಬಗ್ಗೆ ಪತ್ರಿಕೆಗಳಲ್ಲಿ ಕೆಲವು ವರದಿಗಳು ಬಂದಿವೆ. ಆ ಬಗ್ಗೆ ಈಗ ಮಾನ್ಯ ಸದಸ್ಯರು ಕೆಲವು ವಿಚಾರಗಳನ್ನು ಹೇಳಿದ್ದಾರೆ. ಪೋಲೀಸಿನವರು ಆ ಸಂದರ್ಭದಲ್ಲಿ ಎಲ್ಲೆ ಮೀರಿ ವರ್ತಿಸಿದ್ದಾರೆ ಎಂದು ಕೆಲವು ಮಾನ್ಯ ಸದಸ್ಯರು ಆಪಾದನೆಗಳನ್ನು ಮಾಡಿದ್ದಾರೆ. ಇದರ ಬಗ್ಗೆ ನನ್ನ ಮುಂದೆ ಇರತಕ್ಕ ಮಾಹಿತಿ ಮತ್ತು ನನಗೆ ಬಂದಿರತಕ್ಕ ವರದಿ ಪ್ರಕಾರ ಮತ್ತು ನಮ್ಮ ಸಹೋದ್ಯೋಗಿಗಳು ಕೆಲವರು ಆಲ್ಲಿಗೆ ಹೋಗಿ ಬಂದಮೇಲೆ ಅವರಿಂದ ವಿಚಾರವನ್ನು ನಾನು ತಿಳಿದುಕೊಂಡಿರುವ ಪ್ರಕಾರ ಮಾನ್ಯ ಸದಸ್ಯರು ಈಗ ಹೇಳಿದಂತೆ ದೊಡ್ಡ ಪ್ರಮಾಣದ ಅಪಘಾತವಾಗಿಲ್ಲ ಏನೋ ಒಂದು ಅಪಘಾತ ವಾಗಿದೆ ಎಂದು ಹೇಳುತ್ತಾರೆಯೋ ಅದು ನನಗೆ ಕಂಡುಬಂದಿಲ್ಲ. ಇಷ್ಟೂತ್ತು ಮಾತ್ರ ಈ ಸಭೆಯಲ್ಲಿ ಕೆಲವು ಮಾನ್ಯ ಸದಸ್ಯರು ಕೆಲವು ವಿಷಯಗಳನ್ನು ಹೇಳಿದ್ದಾರೆ. ಇದರ ನಿಜಾಂಶವೇನು ಎಂಬುದರ ಬಗ್ಗೆ ಬೇಕಾದರೆ ಮತ್ತೆ ಅಲ್ಲಿಂದ ಒಂದು ವರದಿಯನ್ನು ತರಿಸಿಕೊಳ್ಳುತ್ತೇನೆ. ಅಲ್ಲಿ ರಾಶಿ ಚಾರ್ಜ್

ಅಗಿರತಕ್ಕಂಥಾದ್ದನ್ನು ನಾನು ಡಿನೈ ಮಾಡುತ್ತಿಲ್ಲ. ಎಲ್ಲಾದರೂ ಒಂದು ಕಡೆ ಸಾರ್ವಜನಿಕರ ಆಸ್ತಿ ಪಾಸ್ತಿಗಳಿಗೆ ಅಪಘಾತ ಮಾಡುವಾಗ ಅದನ್ನು ನಿಲ್ಲಿಸತಕ್ಕ ಜವಾಬ್ದಾರಿ ಸರ್ಕಾರಕ್ಕೆ ಹಾಗೂ ಪೋಲೀಸ್ ಇಲಾಖೆಗೆ ಇದೆ. ಒಂದು ವೇಳೆ ನಾಳೆ ಸೋಷಲಿಸ್ಟ್ ಪಕ್ಷ ಅಧಿಕಾರಕ್ಕೆ ಬಂದು ಶ್ರೀಮಾನ್ ಕೋಣಂದೂರು ಲಿಂಗಪ್ಪನವರು ಮುಖ್ಯ ಮಂತ್ರಿಗಳಾದರೆ ದೇಶದಲ್ಲಿ ಪೋಲೀಸರು ಇಲ್ಲದಹಾಗೆ ಮಾಡುತ್ತೇವೆ ಎಂದು ಅವರು ಒಂದು ಘೋಷಣೆಯನ್ನು ಹೊರಡಿಸಬಹುದು.

ಶ್ರೀ ಕೋಣಂದೂರು ಲಿಂಗಪ್ಪ.—ನಾಳೆ ನಮ್ಮ ಪಕ್ಷ ಅಧಿಕಾರಕ್ಕೆ ಬಂದರೆ ನಾವು ಜನಗಳ ಮೇಲೆ ಗುಂಡು ಹಾರಿಸುವುದಿಲ್ಲ, ರಾರಿಯಲ್ಲಿ ಹೊಡೆಯುವುದಿಲ್ಲ ಎಂದು ನಾನು ಹೇಳುತ್ತೇನೆ.

ಶ್ರೀ ಡಿ. ದೇವರಾಜ ಅರಸ್.—ಈ ಘರ್ಷಣೆಗೆ ಜನಕ್ಕೆ ಒಪ್ಪಿ ನಿಮ್ಮ ಪಕ್ಷಕ್ಕೆ ಅವರು ವೋಟು ಕೊಟ್ಟರೆ ನಮ್ಮದು ಯಾರದು ಅಭ್ಯಂತರವಿಲ್ಲ. ಯಾವ ಪಕ್ಷದವರು ಪೋಲೀಸರು ಇಲ್ಲದ ಹಾಗೆ ಸರ್ಕಾರವನ್ನು ನಡೆಸುತ್ತೇವೆ ಎಂದು ಹೇಳುತ್ತಾರೆಯೋ ಅವರಿಗೆ ಬೇಕಾದರೆ ನಾನು ವೋಟು ಕೊಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್.—ನೀವು ರಾಜೀನಾಮೆಯನ್ನು ಕೊಡುವುದಕ್ಕೆ ಸಿದ್ಧ ರಾಗಿದ್ದೀರಾ?

ಶ್ರೀ ಡಿ. ದೇವರಾಜ ಅರಸ್. —ನಾನು ಒಂದು ವೇಳೆ ರಾಜಿನಾಮೆಯನ್ನು ಕೊಟ್ಟರೂ ನಿಮಗೆ ಅಧಿಕಾರ ಸಿಕ್ಕುವುದಿಲ್ಲ.

ಶ್ರೀ ಟಿ. ಎಂ. ಮಂಜುನಾಥ.—ತಾವು ಒಂದು ಸಾರಿ ರಾಜಿನಾಮೆಯನ್ನು ಕೊಟ್ಟು ನೋಡಿ ಏನಾಗುತ್ತದೆ?

ಶ್ರೀ ಡಿ. ದೇವರಾಜ ಅರಸ್.—ನಾನು ಒಂದುವೇಳೆ ರಾಜೀನಾಮೆಯನ್ನು ಕೊಟ್ಟರೂ ನಿಮ್ಮ ಪಕ್ಷದವರಿಗೆ ಇನ್ನೂ 5 ವರ್ಷಗಳವರೆಗೆ ಏನೂ ಮಾಡುವುದಕ್ಕಾಗುವುದಿಲ್ಲ. ನಿಮಗೆ ಅಧಿಕಾರ ಸಿಕ್ಕುವುದಿಲ್ಲ. ಆದ್ದರಿಂದ ಈಗ ನನ್ನ ಮುಂದೆ ಇರತಕ್ಕ ವರದಿಯ ಪ್ರಕಾರ ಈಗ ಮಾನ್ಯ ಸದಸ್ಯರು ಈ ಸಭೆಯಲ್ಲಿ ಹೇಳಿದಂತೆ ಏನೂ ಪೋಲೀಸಿನವರಿಂದ ಅತ್ಯಾಚಾರ ನಡೆದಿಲ್ಲ. ರಾ ಅಂಡ್ ಆರ್ಡರ್ ಮೇಂಟೇನ್ ಮಾಡುವುದಕ್ಕೋಸ್ಕರ ಅಗತ್ಯವಿದ್ದಷ್ಟು ಶಕ್ತಿಯನ್ನು ಮಾತ್ರ ಉಪಯೋಗಿಸುವುದು ಅನಿವಾರ್ಯವಾಗಿತ್ತು ಅದಕ್ಕಾಗಿ ಅಷ್ಟು ಮಾತ್ರ ನಾವು ಮಾಡಿದ್ದೇವೆ. 22 ಜನ ಪೋಲೀಸಿನ ವರಿಗೆ ಕಲ್ಲಿನಲ್ಲಿ ಹೊಡೆದಿರುವುದು ಪತ್ರಿಕೆಗಳಲ್ಲಿ ಬಂದಿದೆ. ವಿದ್ಯಾರ್ಥಿಗಳ ಫೀಜಿನ ವಿಷಯಕ್ಕೂ ಇದಕ್ಕೂ ಯಾವ ಸಂಬಂಧವೂ ಇಲ್ಲ. ಫೀಜಿನ ಪ್ರಶ್ನೆ ನಿಲುವಳಿ ಸೂಚನೆಯ ವಿಚಾರ ಆಗುವುದಿಲ್ಲ. ಮಾನ್ಯ ಮಂತ್ರಿಗಳಾದ ಶ್ರೀ ಶಿವಣ್ಣನವರು ಫೀಜಿನ ವಿಷಯದಲ್ಲಿ ಕೊಟ್ಟ ಭರವಸೆಯನ್ನು ನವಂಬರ್ 22 ರಂದು ಪತ್ರಿಕೆಯಲ್ಲಿ ನೋಡಿದನಂತರ 3-4 ದಿವಸಗಳಲ್ಲಿ ಎಂದರೆ ನವಂಬರ್ 25ನೇ ತಾರೀಖು ವಿದ್ಯಾರ್ಥಿಗಳಿಗೆ ಫೀಜಿನ ವಿನಾಯ್ತಿ ನೀಡುವ ಆಜ್ಞೆಯನ್ನು ನಾವು ಹೊರಡಿಸಿದ್ದೇವೆ. ನನಗೆ ಗುಲ್ಬರ್ಗಾದಿಂದ ಬಂದಿರುವ ಮಾಹಿತಿ ಮತ್ತು ವರದಿಯ ಪ್ರಕಾರ ನಾನು ಕೆಲವು ವಿಚಾರಗಳನ್ನು ಹೇಳಿದ್ದೇನೆ. ಅವು ಸರಿ ಅಥವಾ ತಪ್ಪು ಎಂಬುದನ್ನು ನಾನು ಈಗ ಹೇಳುವುದಕ್ಕೆ ಇಷ್ಟಪಡುವುದಿಲ್ಲ.

ಈ ಅಡ್ಜರ್ನ್‌ಮೆಂಟ್ ಮೋಷನ್ನನ್ನು ಅಡ್ಮಿಟ್ ಮಾಡಬೇಕೇ ಅಥವಾ ಬಿಡಬೇಕೇ ಎಂಬ ತೀರ್ಮಾನವನ್ನು ತೆಗೆದುಕೊಳ್ಳುವುದು ತಮಗೆ ಬಿಟ್ಟಿದ್ದು. ಆದರೆ ಸರ್ಕಾರದ ವತಿಯಿಂದ ಹೇಳುವುದಾದರೆ, ಈ ಒಂದು ಅಡ್ಜರ್ನ್‌ಮೆಂಟ್ ಮೋಷನ್ನನ್ನು ಸಭೆಯ ಮುಂದೆ ತಂದು ಡಿಸ್‌ಕಷನ್ ಮಾಡತಕ್ಕಂಥ ಯಾವ ಒಂದು ದುರ್ಘಟನೆಯೂ ನಡೆದ ಹಾಗೆ ಕಾಣಲಿಲ್ಲ. ಈಗ ನನ್ನ ಮುಂದೆ ಇರತಕ್ಕಂಥ ಮಾಹಿತಿಗಳನ್ನೆಲ್ಲಾ ಸಭೆಯ ಮುಂದೆ ಇಟ್ಟಿದ್ದೇನೆ. ಇನ್ನೂ ಹೆಚ್ಚಿನ ಮಾಹಿತಿ ಗಳನ್ನು ಮಾನ್ಯ ಸಭೆಗೆ ಒದಗಿಸಿಕೊಡುವುದಕ್ಕೆ ನಾನು ತಯಾರಿದ್ದೇನೆ. ಅಲ್ಲಿ ರಾರಿ ಪ್ರಹಾರ ಯಾವ ಕಾರಣದಿಂದ ಆಯಿತು, ನಮ್ಮ ಮಂತ್ರಿಗಳು ಅಲ್ಲಿಗೆ ಹೋದಾಗ ಆಯಿತೇ ಅಥವಾ ಅದಕ್ಕೂ ಮೊದಲೇ ಆಯಿತೇ ಎಂಬ ವಿವರಗಳನ್ನು ತರಿಸಿ ತಮ್ಮ ಅಪ್ಪಣೆ ಮೇರೆಗೆ ಸಭೆಯ ಮುಂದೆ ಇಡುವುದಕ್ಕೆ ನಾನು ತಯಾರಿದ್ದೇನೆ.

5-00 P. M.

ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಅಧ್ಯಕ್ಷರು ಇದರ ಬಗ್ಗೆ ತೀರ್ಮಾನ ಕೊಡುವುದಕ್ಕೆ ಮೊದಲು ಮಾನ್ಯ ಮುಖ್ಯಮಂತ್ರಿಗಳನ್ನು ಒಂದು ವಿಷಯ ಕೇಳಬೇಕಾಗಿದೆ. ಮಾನ್ಯ ಶಿವಣ್ಣ ನವರು ಕೊಟ್ಟಂತಹ ಹುಕುಂ ಏನಿದೆ, ಅದನ್ನು ಕಾರ್ಯರೂಪಕ್ಕೆ ತರುವುದರ ಬಗ್ಗೆ ಸರ್ಕಾರದ ನಿರ್ದಿಷ್ಟವಾದ ನಿಲುವು ಏನು ಎಂಬುದನ್ನು ತಿಳಿಸಬೇಕು?

ಶ್ರೀ ಡಿ. ದೇವರಾಜ ಅರಸ್.—ಫೀ ವಿಚಾರದಲ್ಲಿ ತಮ್ಮ ಅಭಿಪ್ರಾಯಗಳನ್ನು ತಿಳಿಸುವುದಕ್ಕೆ ಮತ್ತು ಅದರ ಬಗ್ಗೆ ಮಾತನಾಡುವುದಕ್ಕೆ ಬೇರೆ ಅವಕಾಶವಿದೆ. ಆದಕಾರಣ ಅದರ ಬಗ್ಗೆ ನಾನು ಈಗ ವಾಖ್ಯಾನ ಮಾಡುವುದಕ್ಕಾಗಲೀ, ಮತ್ತು ಅದರ ಬಗ್ಗೆ ಹೊರಡಿಸಿರುವ ಸರ್ಕಾರೀ ಆಜ್ಞೆ ಸರಿಯೇ ಅಥವಾ ತಪ್ಪೇ ಎಂದು ಹೇಳುವುದಕ್ಕೆ ಈಗ ಹೋಗುವುದಿಲ್ಲ.

ಶ್ರೀ ಎಚ್. ಡಿ. ದೇವೇಗೌಡ.—ಈಗ ಬಿಜಾಪುರ, ಗುಲ್ಬರ್ಗ, ಬಿದರ್ ಮುಂತಾದ ಕಡೆಗಳಲ್ಲಿರುವ ಅಭಾವ ಪರಿಸ್ಥಿತಿಯ ಬಗ್ಗೆ ಚರ್ಚೆ ಮಾಡುವ ನಿರ್ಣಯ ನಮ್ಮ ಮುಂದೆ ಇದೆಯೇ ಹೊರತು ಈ ಫೀಯನ್ನು ಮನ್ನಾ ಮಾಡುವ ವಿಚಾರ ನಮ್ಮ ಮುಂದೆ ಇಲ್ಲ. ಆದ್ದರಿಂದ ಅದರ ಬಗ್ಗೆ ಸರ್ಕಾರದ ನಿಲುವು ಏನು ಎಂಬುದನ್ನು ತಿಳಿಸಿದರೆ ಒಳ್ಳೆಯದು.

ಶ್ರೀ ಎಂ. ಕೆ. ಸುರ್‌ಪುರ್.—ಮಾನ್ಯ ಮುಖ್ಯಮಂತ್ರಿಗಳು ಫೀಯನ್ನು ಮನ್ನಾ ಮಾಡುವ ವಿಚಾರದಲ್ಲಿ ಕೇವಲ ಬಿದರ್ ಮತ್ತು ಗುಲ್ಬರ್ಗ ಜಿಲ್ಲೆಯಲ್ಲಿ ಮಾಡಲಾಗಿದೆ ಎಂದು ಹೇಳಿದರು. ಮಾನ್ಯ ರಾಥೋಡ್ ಅವರು ನಮ್ಮ ಬಿಜಾಪುರ ಜಿಲ್ಲೆಯಲ್ಲಿಯೂ ಫೀಯನ್ನು ಮನ್ನಾ ಮಾಡಲಾಗುವುದೆಂದು ಹೇಳಿದ್ದಾರೆ. ಆದ್ದರಿಂದ ಬಿಜಾಪುರ ಜಿಲ್ಲೆಯ ಬಗ್ಗೆ ಸರ್ಕಾರದ ನಿಲುವು ಏನು ಎಂಬುದನ್ನು ತಿಳಿಸಬೇಕು. ಇಲ್ಲವಾದ್ದರೆ ನಮ್ಮ ಜಿಲ್ಲೆಯಲ್ಲಿಯೂ ಸಹ ವಿದ್ಯಾರ್ಥಿಗಳ ಚಳುವಳಿ ಪ್ರಾರಂಭವಾಗಬಹುದೆಂದು ಹೇಳುತ್ತೇನೆ.

ಶ್ರೀ ಡಿ. ದೇವರಾಜ ಅರಸ್.—ಅದಕ್ಕೆ ಬೇರೆ ಸಮಯವಿದೆ. ಆಗ ಹೇಳುತ್ತೇನೆ. ಈಗ ಸಭೆಯ ಮುಂದಿರುವ ಅಡ್‌ಜರ್ನ್‌ಮೆಂಟ್ ಮೋಷನ್ ಬಗ್ಗೆ ಮಾತನಾಡೋಣ. ಈಗ ಸಧ್ಯಕ್ಕೆ ಯಾರು ಯಾರಿಗೆ ತಿಂಗಳಿಗೆ 500 ರೂಪಾಯಿಗಳಿಗಿಂತ ಕಡಿಮೆ ವರಮಾನ ಇದೆಯೋ ಅಂತಹವರ ಮಕ್ಕಳಿಗೆ ಫೀ ಬಗ್ಗೆ ರಿಯಾಯಿತಿ ಕೊಡೋಣ ಎಂದು ತೀರ್ಮಾನ ತೆಗೆದುಕೊಂಡಿದ್ದೇವೆ. ಒಹುಶಃ ಮಾನ್ಯ ವಿರೋಧಪಕ್ಷದ ನಾಯಕರ ಅಭಿಪ್ರಾಯದಲ್ಲಿ ಎಲ್ಲರಿಗೂ ಫೀ ರಿಯಾಯಿತಿ ಕೊಡಬೇಕಾಗಿತ್ತು ಎಂದು ಕಾಣುತ್ತದೆ.

ಶ್ರೀ ವಾಟಾಳ್ ನಾಗರಾಜ್.—ಎಲ್ಲರಿಗೂ ಫೀ ಮನ್ನಾ ಮಾಡುವುದಾಗಿ ಮಾನ್ಯ ಶಿಪಣ್ಣನವರು ಹೇಳಿದ್ದಾರೆ.

ಶ್ರೀ ಡಿ. ದೇವರಾಜ ಅರಸ್.—ಅವರ ಹೇಳಿಕೆ ಸರ್ಕಾರದ ಹೇಳಿಕೆಯಲ್ಲ. ಈಗ ಒಂದು ತಪ್ಪಾದ ಆರ್ಡರ್‌ನ ಮೇಲೆ 500 ರೂಪಾಯಿಗಳಿಗಿಂತ ಕಡಿಮೆ ಆದಾಯ ಇರುವವರಿಗೆ ಫೀ ರಿಯಾಯಿತಿ ಕೊಡಬೇಕೆಂದು ತೀರ್ಮಾನ ತೆಗೆದುಕೊಂಡಿದ್ದೇವೆ. ಎಲ್ಲರಿಗೂ ಫೀ ರಿಯಾಯಿತಿ ಕೊಡಬೇಕಾಗಿತ್ತು ಎಂಬುದು ಸೋಷಿಯಲಿಸ್ಟ್ ಪಾರ್ಟಿಯವರ, ಕಮ್ಯುನಿಸ್ಟ್ ಪಾರ್ಟಿಯವರ ಅಭಿಪ್ರಾಯ ಇತ್ತೆಂದು ಕಾಣುತ್ತದೆ. ಆ ರೀತಿ ಅವರು ಜನರಿಗೆ ಹೇಳಿಕೊಂಡು ಬಂದಿದ್ದರೆಂದು ಕಾಣುತ್ತದೆ.

ಶ್ರೀ ವಿ. ಎನ್. ಪಾಟೀಲ್.—ಸಾಮಾನ್ಯ ರೀತಿ ಏನೂ ಹೇಳಿಕೊಂಡು ಬರಲಿಲ್ಲ.

ಶ್ರೀ ಡಿ. ದೇವರಾಜ ಅರಸ್.—ಈಗ ಫೀಯನ್ನು ತಾತ್ಕಾಲಿಕವಾಗಿ ಮನ್ನಾ ಮಾಡಬೇಕೇ ಅಥವಾ ಬಿಡಬೇಕೆ ಎಂಬ ಪ್ರಶ್ನಾರ್ಥಕವಾದ ವಿಚಾರ ನಮ್ಮ ಮುಂದೆ ಇದೆ. ಈಗ ರಾಜ್ಯದ ಹಲವು ಭಾಗಗಳಲ್ಲಿ ಅಭಾವ ಪರಿಸ್ಥಿತಿ ಇರುವುದರಿಂದ, ಅದರ ಬಗ್ಗೆ ಸರ್ಕಾರಕ್ಕೆ ಕೆಲವು ಜವಾಬ್ದಾರಿಗಳು ಇವೆ. ಜನರಿಗೆ ಕೆಲಸ ಕೊಡುವ ಜವಾಬ್ದಾರಿ, ಆಹಾರ ಒದಗಿಸುವ ಜವಾಬ್ದಾರಿ, ನೀರನ್ನು ಒದಗಿಸುವ ಜವಾಬ್ದಾರಿಯನ್ನು ಸರ್ಕಾರ ನಿರ್ವಹಣೆ ಮಾಡಬೇಕಾಗಿದೆ. ಇದರ ಜೊತೆಗೆ ಫೀಯನ್ನು ಸಹ ಮನ್ನಾ ಮಾಡುವುದು ಸರ್ಕಾರದ ಪ್ರೈಮರಿ ರೆಸ್‌ಪಾನ್‌ಸಿಬಿಲಿಟಿಯೇ ಎಂಬುದನ್ನು ಮಾನ್ಯ ಸದಸ್ಯರು ಯೋಚನೆ ಮಾಡಬೇಕು. ನನ್ನ ದೃಷ್ಟಿಯಲ್ಲಿ ಹೇಳುವುದಾದರೆ ಫೀಯನ್ನು ಮನ್ನಾ ಮಾಡತಕ್ಕಂಥದ್ದು ಸರ್ಕಾರದ ಪ್ರೈಮರಿ ರೆಸ್‌ಪಾನ್‌ಸಿಬಿಲಿಟಿ ಅಲ್ಲ. ಈ ಹಿಂದೆ ಅಂತಹ ಒಂದು ತೀರ್ಮಾನ ತೆಗೆದುಕೊಂಡ ಉದಾಹರಣೆ ಇಲ್ಲ. ಆದರೆ ಯಾವುದೋ ಒಂದು ಕಾರಣದಿಂದ ನಮ್ಮ ಮಂತ್ರಿಮಂಡಲದ ಒಬ್ಬರು ಸಚಿವರು ಫೀಯನ್ನು ಮನ್ನಾ ಮಾಡಲಾಗುತ್ತದೆಂದು ಹೇಳಿದ್ದರಿಂದ, ಅವರ ಮಾತಿಗೆ ಹಿಂದಕ್ಕೆ ಹೋಗಬಾರದೆಂದು ಮಂತ್ರಿಮಂಡಲದವರು ತಿಂಗಳಿಗೆ 500 ರೂಪಾಯಿಗಳಿಗಿಂತ ಕಡಿಮೆ ವರಮಾನ ಇರುವವರ ಮಕ್ಕಳಿಗೆ ಫೀಯನ್ನು ಮನ್ನಾ ಮಾಡುವುದು ತೀರ್ಮಾನ ತೆಗೆದುಕೊಂಡಿದ್ದೇವೆ. ಆದರೆ ಎಲ್ಲರಿಗೂ ಫೀಯನ್ನು ಮನ್ನಾ ಮಾಡುವುದು ಸಾಧ್ಯವಿಲ್ಲ. ಎಲ್ಲರಿಗೂ ಫೀಯನ್ನು ಮನ್ನಾ ಮಾಡಬೇಕೆಂದು ಮಾನ್ಯ ಸದಸ್ಯರು ಹೇಳಬಹುದು, ಆದರೆ ಅದನ್ನು ಒಪ್ಪುವುದಕ್ಕೆ ಸಾಧ್ಯವಿಲ್ಲ. ಇಂದು ಅಭಾವ ಪರಿಸ್ಥಿತಿ ಇರುವ ಕಡೆಗಳಲ್ಲಿಯೂ ಸಹ

500 ರೂಪಾಯಿಗಳ ಮೇಲೆ ಆದಾಯ ಇರುವವರು ಇದ್ದಾರೆ. ವ್ಯವಸಾಯ ಒಂದನ್ನು ಬಿಟ್ಟರೆ ಇತರೇ ವ್ಯವಹಾರಗಳು, ವ್ಯಾಪಾರಗಳು ನಡೆಯುತ್ತಿದೆ. ಸಿನಿಮಾಗಳು ನಡೆಯುತ್ತಿವೆ.

ಶ್ರೀ ಎಸ್. ಬಂಗಾರಪ್ಪ.—ಆ ಭಾಗಗಳಲ್ಲಿ ಸಾರಾಯಿಯಿಂದ ಹೆಚ್ಚು ವರಮಾನ ಬರುತ್ತಿದೆ ಎಂದು ತಾವೇ ಹೇಳಿಕೆ ಕೊಟ್ಟಿದ್ದೀರಿ.

ಶ್ರೀ ಡಿ. ದೇವರಾಜ ಅರಸ್.—ಅದು ಲೆಕ್ಕಗಳಿಂದ ಗೊತ್ತಾಗುತ್ತಿದೆ. ಆದ್ದರಿಂದ ಯಾರಿಗೆ ಫೀಯನ್ನು ಕೊಡುವುದಕ್ಕೆ ಅರ್ಹತೆ ಇವೆಯೋ ಅಂತಹವರು ಕೊಡುವುದು ನ್ಯಾಯ ಎಂದು ಹೇಳುತ್ತೇನೆ. ಮಾನ್ಯ ದೇವೇಗೌಡರ ಅಭಿಪ್ರಾಯದಲ್ಲಿ ಎಲ್ಲರಿಗೂ ಫೀ ವಿನಾಯಿತಿ ಕೊಡಬೇಕು ಎಂದು ಇದ್ದರೂ ಸರ್ಕಾರದ ಅಭಿಪ್ರಾಯದಲ್ಲಿ ಅದು ಸರಿಯಲ್ಲ ಎಂದು ಹೇಳುತ್ತೇನೆ. ಮತ್ತೆ ಪೊನ್ನೆ ಗುಲ್ಬರ್ಗದಲ್ಲಿ ನಡೆದ ಗಲಭೆಗಳ ಸಂಬಂಧದಲ್ಲಿ ಕೆಲವು ಕೇಸ್‌ಗಳನ್ನು ರಿಜಿಸ್ಟರ್ ಮಾಡಲಾಗಿದೆ.

On 25th November 5 students were injured; 25 police officers including the Superintendent of Police and Deputy Superintendent of Police were injured; two cases were registered and 21 students were arrested.

ಇದು ಇಂತಕ್ಕಂಥ ಪರಿಸ್ಥಿತಿ. ಈ ಕಾರಣದಿಂದ ಈ ಒಂದು ಅಡ್‌ಜರ್ನ್‌ಮೆಂಟ್ ಮೋಷನ್ನನ್ನು ಅಡ್ಮಿಟ್ ಮಾಡುವುದು ಯಾವ ಕಾರಣದಿಂದಲೂ ಸೂಕ್ತವಾಡುವು ಅಲ್ಲ ಎಂದು ತಮ್ಮಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.—ಈ ಬಗ್ಗೆ ಮಾನ್ಯ ಅಧ್ಯಕ್ಷರು ರೂಲಿಂಗ್ ಕೊಡುವುದಕ್ಕೆ ಮೊದಲು ನನ್ನ ಒಂದು ಪಾಯಿಂಟ್ ಆಫ್ ಕ್ಲಾರಿಫಿಕೇಷನ್ ಇದೆ. ಏನೆಂದರೆ ಮಾನ್ಯ ಮುಖ್ಯ ಮಂತ್ರಿಗಳು ಈಗತಾನೆ ಮಾತನಾಡುತ್ತಾ ಫೀಯನ್ನು ಮನ್ನಾ ಮಾಡಬೇಕೆಂಬುದಾಗಿ ತಮ್ಮ ಹತ್ತಿರ ಯಾವ ವಿಧಾನಸಭಾ ಸದಸ್ಯರೂ ಕೂಡ ಬಂದು ಕೇಳಲಿಲ್ಲವೆಂದು ಹೇಳಿದರು. ನಾನು ಆ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳ ಹತ್ತಿರ ಮಾತನಾಡಿದ್ದೆ ಸಹ ನಮ್ಮ ಸ್ಟೇಟ್ ಕೌನ್ಸಿಲ್ ಒಂದು ನಿರ್ಣಯ ಮಾಡಿ ಫೀಯನ್ನು ಮನ್ನಾ ಮಾಡಬೇಕೆಂದು ಸರ್ಕಾರಕ್ಕೆ ಕಳುಹಿಸಿಕೊಟ್ಟಿದೆ.

ಶ್ರೀ ಕಾಗೋಡು ತಿಮ್ಮಪ್ಪ.—ಬಡವರಿಗೆ ಫೀ ವಿಚಾರವಲ್ಲಿ ಅನುಕೂಲವಾಗಬೇಕೆಂಬ ಧೋರಣೆಯನ್ನು ನಾವು ಇಟ್ಟುಕೊಂಡಿದ್ದೇವೆ ಎಂದು ತಾವು ಹೇಳಿದಿರಿ. ಈಗ ಒಂದು ವೇಳೆ ನೌಕರಿಯಲ್ಲದಂತಕ್ಕವರ ಒಂದು ಪಂಗಡಕ್ಕೆ ಸೇರಿದಂತೆ ಹೇಳುವುದು ಬೇಡ. ನಿಮ್ಮ ಪಕ್ಷದವರು ಹಾಗೂ ಆ ಪ್ರದೇಶದಿಂದ ಬಂದಿರತಕ್ಕ ನಿಮ್ಮ ಶಾಸನ ಸಭಾ ಸದಸ್ಯರುಗಳು ಏನು ತಮಗೆ ಮನವಿ ಮಾಡಿದ್ದಾರೆ ಅದರಂತೆ ಅನುಕೂಲವಾದ ಕಾರ್ಯಕ್ರಮಗಳನ್ನು ವಿದ್ಯಾರ್ಥಿಗಳ ಬಗ್ಗೆ ವಿಚಾರ ಮಾಡಿ ತಾವು ಇಲ್ಲಿ ಪರಿಶೀಲನೆ ಮಾಡಬೇಕಾಗಿದೆ.

ಶ್ರೀ ಡಿ. ದೇವರಾಜ ಅರಸ್.—ಮಾನ್ಯ ಸದಸ್ಯರಲ್ಲಿ ನಾನು ಪ್ರಾರ್ಥನೆ ಮಾಡುವುದು ಏನೆಂದರೆ ನಮ್ಮ ಪಕ್ಷದವರು ಅಥವಾ ನಿಮ್ಮ ಪಕ್ಷದವರು ಎಂದು ಹೇಳಿ ನಮ್ಮ ಪಕ್ಷದವರು ಹೇಳಿದರೆ ಮಾಡುತ್ತಾರೆ, ನಿಮ್ಮ ಪಕ್ಷದವರು ಹೇಳಿದರೆ ಮಾಡಬಾರದು ಎನ್ನುವುದೇನೂ ಇದರಲ್ಲಿಲ್ಲ. ಈ ರೀತಿ ಖಂಡಿತ ನಮ್ಮ ಮನಸ್ಸಿನಲ್ಲಿಲ್ಲ. ತಾವು ಹೇಳಿದ ಪ್ರಕಾರ ನಿಮ್ಮ ಸಾಲಿಸಿಟುಗಳನ್ನು ನಾವೂ ಒಪ್ಪುತ್ತೇವೆ. ತಾವು ಹೇಳುವುದೇನಿದೆ ಅದನ್ನೂ ಪರಿಶೀಲನೆ ಮಾಡೋಣ. ನಿಜವಾಗಿಯೂ ಇದರಲ್ಲಿ ಪೂರ್ತಿ ತೊಂದರೆಗೊಳಗಾಗಿರುವವರ ಬಗ್ಗೆ ತಾವು ತಿಳಿಸಿದರೆ ಅದನ್ನು ಪರಿಶೀಲನೆ ಮಾಡೋಣ. 500 ರೂಪಾಯಿಗಳಿಗಿಂತ ಹೆಚ್ಚು ವರಮಾನ ಇರುವವರಿಗೂ ವಿನಾಯಿತಿ ಕೊಡಬೇಕೆಂದು ಹೇಳಿದರೆ ಅದು ಬಹು ಕಷ್ಟವಾಗುತ್ತದೆ, ಇದು ನನಗೂ ಗೊತ್ತಿದೆ ಇವೆಲ್ಲವನ್ನೂ ಯೋಚನೆ ಮಾಡಿ ಎಲ್ಲಿಯಾದರೂ ಹಾರ್ಡ್ ಕೇಸುಗಳು ಇದ್ದರೆ ಅವನ್ನೂ ಪರಿಶೀಲನೆ ಮಾಡೋಣ, ಇದರಲ್ಲಿ ಇನ್ನೂ ಒಂದು ವಿಚಾರ ಇದೆ, ಈಗ ಸುಮಾರು ಶೇಕಡಾ 30 ರಿಂದ 40 ಭಾಗದಷ್ಟು ವಿದ್ಯಾರ್ಥಿಗಳು ಫೀ ಎಕ್ಸೆಂಪ್ಷನ್ ಹಾಗೂ ಸ್ಕಾಲರುಷಿಪ್ಪುಗಳು ಇತ್ಯಾದಿ ಸೌಕರ್ಯಗಳನ್ನು ಪಡೆಯುತ್ತಿದ್ದಾರೆ. ಎಲ್ಲೋ ಕೆಲವಕ್ಕೆ ಈಗ ಕಷ್ಟವಾಗಿರಬಹುದು. ಇದನ್ನು ಪರಿಶೀಲನೆ ಮಾಡುವಾಗ ನಾನು ತಮ್ಮಲ್ಲಿ ಪ್ರಾರ್ಥನೆ ಮಾಡುವುದು ನಾವು ಯಾವುದೇ ಕೆಲಸ ಮಾಡಬೇಕಾದರೂ ಒಂದು ನೀತಿಯ ಆಧಾರದ ಮೇಲೆ ಹೋಗಬೇಕಾಗುತ್ತದೆ. ಇವೊತ್ತು ನಾವು ಸರ್ಕಾರದಲ್ಲಿರಬಹುದು. ಇಲ್ಲವೇ ಮುಂದೆ ಬೇರೆ ಪಕ್ಷದವರು ಸರಕಾರ ನಡೆಸಬಹುದು. ಆದರೆ ಸರ್ಕಾರದ ನೀತಿ ಏನಿದೆಯೋ ಅದಕ್ಕನುಸಾರವಾಗಿ ಸರಕಾರ ಕೆಲಸ ಮಾಡಬೇಕಾಗುತ್ತದೆ. ಇಲ್ಲದೆ ಇದ್ದರೆ ಸರ್ಕಾರ ನಡೆಸುವುದು ಕಷ್ಟವಾಗುತ್ತದೆ, ಇದನ್ನು ತಾವೆಲ್ಲರೂ ಗಮನಿಸಬೇಕು, ಮಾನ್ಯ ಸದಸ್ಯರಾದ ಶ್ರೀಮಾನ್

(ಶ್ರೀ ಡಿ ದೇವರಾಜ ಅರಸ್)

ಬಂಗಾರಪ್ಪನವರು ಕೆಲವು ಮಾಹಿತಿಗಳನ್ನು ಕೇಳಿದರು, ಅವನ್ನೆಲ್ಲಾ ಕೊಡುವುದಕ್ಕೆ ಸಿದ್ಧನಾಗಿದ್ದೇನೆ. ಅವನ್ನು ತಾವು ವಿಮರ್ಶೆ ಮಾಡಿ. ಇಷ್ಟು ವಿವರಗಳನ್ನು ನಾನು ಕೊಟ್ಟಿರುವುದರಿಂದ ನಾನು ಸಭೆಯಲ್ಲಿ ಪ್ರಾರ್ಥನೆ ಮಾಡುವುದು ಇಷ್ಟೆ. ಇಲ್ಲಿ ತಂದಿರುವ ಅಡ್‌ಜರ್ನ್‌ಮೆಂಟ್ ಮೋಷನ್‌ಗೆ ಅವಕಾಶ ಕೊಡುವುದು ಸರಿಯಿಲ್ಲ ಎಂದು ಹೇಳುತ್ತೇನೆ.

†ಶ್ರೀ ಹೆಚ್. ಡಿ. ದೇವೇಗೌಡ.—ಮಾನ್ಯ ಮುಖ್ಯ ಮಂತ್ರಿಗಳು ಹೇಳುವಾಗ ನಾನು ಶ್ರೀಮಂತರಿಗೆ ಅನುಕೂಲವಾಗುವ ಹಾಗೆ ವಾದ ಮಾಡುತ್ತೇನೆ ಎನ್ನುವ ಭಾವನೆಯಿಂದ ಹೇಳಿದರು. ಶ್ರೀಮಂತರ ಪರವಾಗಿ ಇಲ್ಲ ವಾದ ಮಾಡಬೇಕೆಂದು ನಾನು ಹೇಳುತ್ತಿಲ್ಲ. ಗ್ರಾಮಾಂತರ ಪ್ರದೇಶಗಳಿಂದ ಬಂದಿರತಕ್ಕವರು ಹಾಗೂ ಯಾರು ಜಮೀನು ಇಟ್ಟುಕೊಂಡು ಜೀವನ ವಾಡುತ್ತಿದ್ದಾರೋ ಅವರ ಬಗ್ಗೆ ಹೇಳುತ್ತಿದ್ದೆ. ಸುಮಾರು 200 ಎಕರೆ ಭೂಮಿ ಇದ್ದರೂ ಅವರಿಗೆ ಮಳೆ ಇಲ್ಲದೇ ಹೋದರೆ ಬೆಳೆ ಏನು ಬರುತ್ತದೆ. ಮಳೆಯೇ ಇಲ್ಲದೆ ಬೆಳೆನೇ ಬರದೇ ಇರುವುದರಿಂದ ಇವರಿಗೆಲ್ಲ ಬಹಳ ಕಷ್ಟವಾಗಿದೆ. ತಾವು ಹೇಳಿದಂತೆ ನಾನು ನಗರದಲ್ಲರುವ ಸಿನಿಮಾ ಮಾಲೀಕರುಗಳ ಪರವಾಗಿ ಹಾಗೂ ಪಟ್ಟಣದಲ್ಲರುವವರ ಪರವಾಗಿ ಅನುಕೂಲ ಮಾಡಿಕೊಡಿ ಎಂದು ಹೇಳುತ್ತಿಲ್ಲ. ಇಲ್ಲರ ವ ಫ್ಯಾಮಿನ್ ಕಂಡಿಷನ್‌ಗಳಿಂದಾಗಿ ಇವರ ವಿದ್ಯಾರ್ಥಿಗಳಿಗೆ ಫೀಜು ಬಗ್ಗೆ ಎಕ್ಸೆಂಪ್‌ಷನ್ ಕೊಡಬೇಕೆಂದು ನಿರ್ಣಯ ತೆಗೆದುಕೊಂಡು ಬಂದ ನಿಮ್ಮ ಸಚಿವರ ಹೇಳಿಕೆಗೂ ತಾವು ಇಲ್ಲ ಹೇಳುವುದಕ್ಕೂ ತಾರತಮ್ಯವಿದೆ ಎಂದು ವಾಸ್ತವ ಇಲ್ಲ ಹೇಳುತ್ತಿದ್ದೇನೆ ತಾವು ಇಲ್ಲ 500 ರೂಪಾಯಿಗಳ ಸೀಲಿಂಗ್ ಲಿಮಿಟು ಇಟ್ಟರೆ ಇದನ್ನು ಸರಿಯಾಗಿ ಅಳತೆ ಮಾಡಲು ನಿಮ್ಮಲ್ಲಿರುವ ಅಳತೆಗೋಲಾದರೂ ಯಾವುದು ? ಬೆಳೆಯೇ ಇಲ್ಲದೆ ಇರುವ ಜಮೀನುಳ್ಳವರಿಗೆ ಯಾವ ರೀತಿ ಅನುಕೂಲವಾಗುತ್ತದೆ ? ನಗರಗಳಲ್ಲರುವವರ ಬಗ್ಗೆ ನಾನು ಇಲ್ಲ ವಾದ ಮಾಡುತ್ತಿಲ್ಲ. ಗ್ರಾಮಾಂತರಗಳಿಂದ ಬಂದಿರತಕ್ಕವರ ಸ್ಥಿತಿ ಬಗ್ಗೆ ಯಾವ ಕ್ರಮ ತೆಗೆದುಕೊಳ್ಳುತ್ತೀರಿ ಎಂದು ಕೇಳುತ್ತಿದ್ದೇನೆ. ಇದರಲ್ಲಿ ಮುಖ್ಯ ಮಂತ್ರಿಗಳು ಹೇಳುವಾಗ ಸರ್ಕಾರದವರಿಗೆ ಇದರ ಪ್ರೈಮರಿ ರೆಸ್‌ಪಾನ್ಸಿಬಿಲಿಟಿ ಏನೂ ಇಲ್ಲ ಎಂದು ಹೇಳಿದರು. ವ್ಯೆಯಕ್ತಿಕವಾಗಿ ನಾನು ಹೇಳುವುದಾದರೆ ನಾನು ಸುಮಾರು ಹತ್ತು ವರ್ಷಗಳಿಂದಲೂ ಈ ಸಭೆಯಲ್ಲಿ ಬರಗಾಲದ ಬಗ್ಗೆ ಚರ್ಚೆ ಮಾಡುತ್ತಿದ್ದೇನೆ ಹಿಂದೆ ಇಂತಹ ಒಂದು ಸಮಸ್ಯೆ ಯಾವಾಗಲೂ ಬಂದಿರಲಿಲ್ಲ. ಆದರಲ್ಲೂ ಗುಲ್ಬರ್ಗಾ ಹಾಗೂ ಬೀದರು ಜಿಲ್ಲೆಗಳಲ್ಲಿ ಇಂದು ಯಾವ ಕ್ಷಾವ್ದ ಪ ಸ್ಥಿತಿ ಇದೆ ಇಂತಹುದು ಹಿಂದೆ ಬೇರೆ ರಾಜ್ಯದಲ್ಲಿ ಯಾವಾಗಲೂ ಇರಲಿಲ್ಲ.

ಶ್ರೀ ಡಿ. ದೇವರಾಜ ಅರಸ್.—ಬೇರೆ ರಾಜ್ಯಗಳಲ್ಲೂ ಬಂದಿದೆ.

ಶ್ರೀ ಹೆಚ್. ಡಿ. ದೇವೇಗೌಡ.—ಬೇರೆ ಕಡೆಗಳಲ್ಲೂ ಬಂದಿರಬಹುದು. ಆದರೆ ನಮ್ಮ ರಾಜ್ಯದಲ್ಲಿ ಈಗ ಬಂದಿರುವಷ್ಟು ಭೀಕರ ಪರಿಸ್ಥಿತಿ ಯಾವಾಗಲೂ ಬಂದಿರಲಿಲ್ಲ. ಬೀದರು ಹಾಗೂ ಗುಲ್ಬರ್ಗಾದ ಗ್ರಾಮಾಂತರ ಪ್ರದೇಶಗಳಿಂದ ಬಂದಿರತಕ್ಕ ಮಕ್ಕಳಿಗೆ ಅವರು ಯಾರೇ ಆಗಿರಲಿ ಅವರಿಗೆಲ್ಲಾ ಫೀಜು ವಿನಾಯಿತಿ ಕೊಡುವುದು ಸರಿಯಾಗಿರುತ್ತದೆ. ಈಗ ಸರ್ಕಾರದ ಹುಕುಂ ಪ್ರಕಾರ ನೋಡಿದರೆ ತಿಂಗಳಿಗೆ 500 ರೂಪಾಯಿಗಳಷ್ಟು ವರಮಾನವಿರುವವರಿಗೆ ಮಾತ್ರ ಎಂದರೆ ವರ್ಷಕ್ಕೆ ಸುಮಾರು ಆರು ಸಾವಿರದಷ್ಟು ವರಮಾನ ಬರುವವರಿಗೆ ಮಾತ್ರ ಫೀಜುಗಳ ಎಕ್ಸಂಪ್‌ಷನ್ ಕೊಡಬಹುದು ಎಂದು ಇದೆ. ಇಂದು ಗ್ರಾಮಾಂತರ ಪ್ರದೇಶಗಳಿಂದ ಬಂದಿರುವವರಿಗೆ ವರ್ಷಕ್ಕೆ ಆರು ಸಾವಿರ ರೂಪಾಯಿಗಳಷ್ಟು ವರಮಾನ ಯಾರಿಗೆ ಬರುತ್ತಿದೆ ಎನ್ನುವುದನ್ನು ಸರ್ಕಾರ ಪರಿಶೀಲನೆ ಮಾಡಿದ್ದಾರೆಯೇ ? ಇದನ್ನು ಯಾವ ಆಧಾರದ ಮೇಲೆ ಮಾಡಿದ್ದೀರಿ.

ಶ್ರೀ ಡಿ. ದೇವರಾಜ ಅರಸ್.—ತಾವು ಹೇಳುವ ವಿಚಾರವೂ ನನಗೆ ಗೊತ್ತಿದೆ. ನಾನು ಈ ಭಾಗದ ವಿಚಾರವನ್ನು ತಿಳಿದುಕೊಂಡಿದ್ದೇನೆ. ಕೆಲವು ಕಡೆಗಳಲ್ಲಿ 200-300 ಎಕರೆಗಳಷ್ಟು ಭೂಮಿ ಇರುವವರಿಗೆ ಸಾಕಾದಷ್ಟು ವರಮಾನ ಬರುತ್ತಿದೆ. ಕೆಲವರಿಗೆ ಸಸ್‌ಟೇನಬಿಲಿಟಿ ಇದೆ. ಕೆಲವು ಕಡೆಗಳಲ್ಲಿ ಇರಲಾರದು, ಯಾರಿಗೆ ಕೃಪಾಶ್ರಿಟಿ ಇದೆಯೋ ಅಂತಹವರು ಕೊಡಲು, ಯಾರಿಗೆ ಸಸ್‌ಟೇನಬಲಿಟಿ ಇರುತ್ತದೆ ಯಾರಿಗೆ ಇಲ್ಲ ಎನ್ನುವುದನ್ನು ಒಪ್ಪುವದು ಕಷ್ಟವಾಗುತ್ತದೆ. ಇದು ಹೇಗಿದೆ ಎಂದರೆ ನಂತೆಯಲ್ಲಿ ಉಪ್ಪು ಹಾಗೂ ಕೆಂಗಿನಕಾಯಿ ವಾರಲು ಬಂದ ವರ್ತಕರಂತೆ ಆಗಿದೆ. ನಂತೆಯಾಗುತ್ತಿದ್ದಾಗ ಮಳೆ ಬಂದು ಉಪ್ಪು ಎಲ್ಲ ನೀರಿನಲ್ಲಿ ನೆಂದು ಕೊಚ್ಚಿ ಕೊಂಡು ಹಾಳಾಗಿ ಹೋಯಿತು ಎಂದು ಉಪ್ಪಿನವನು ಸಂಕಕ್ಕೆ ವಿನಾಯಿತಿ ಕೇಳಿದರೆ ಅದೇ ರೀತಿ ತೆಂಗಿನಕಾಯಿ ವಾರುವವನೂ ಕೂಡ ತೆಂಗಿನಕಾಯಿ ಮಳೆಯಿಂದ ನೆನೆದು ಹಾಳಾಗಿ ಹೋಯಿತು, ಎಂದು ನಮಗೂ ಸುಂಕಕ್ಕೆ ವಿನಾಯಿತಿ ಕೊಡಿ ಎಂದು ಕೇಳಿದಂತಾ ಗುತ್ತದೆ.

ಶ್ರೀ ಹೆಚ್. ಡಿ. ದೇವೇಗೌಡ. ನಸ್ಜೇನಬಲಿಟಿ ಇರುವವರ ಕಡೆಯಿಂದಿ ನಾವು ತಗೆದುಕೊಳ್ಳ ಬೇಕಾಗುತ್ತದೆ ಎಂದು ಹೇಳುವ ವಾದ ಅಷ್ಟು ಸರಿಯಿಲ್ಲ. ತಮ್ಮ ಪಕ್ಕದಲ್ಲೇ ಕುಳಿತಿರುವ ಮಾನ್ಯ ಮಂತ್ರಿಗಳಾದ ಶ್ರೀಮಾನ್ ಚನ್ನಬಸಪ್ಪನವರಿಗೆ ಸುಮಾರು ನಾನೂರು ಎಕರೆಗಳಷ್ಟು ಜಮೀನು ಇತ್ತು. ಇಂದು ಅವರು ವ್ಯವಸಾಯ ಮಾಡಿ ಎಷ್ಟು ಆದಾಯ ಬಂದಿದೆ ಎತ್ತು, ಅವರಿಗೇನು ಇಂದು ಬ್ಯಾಂಕು ಬಾಲೆನ್ಸ್ ಇದೆ ಅದನ್ನು ಕೇಳಿ ತಾವು ಹೇಳಿ. ನಮ್ಮನೆ ನಸ್ಜೇನಬಲಿಟಿ ಇಲ್ಲವೇ ಕೆಪ್ಯಾಸಿಟಿ ಇರುವವರ ಮೇಲೆ ಸರಕಾರದ ಬಜಾನೆಯ ನ್ನು ತುಂಬುತ್ತೇವೆ ಎಂದು ಹೇಳುವ ಭಾವನೆ ಸರಿಯಲ್ಲ.

ಶ್ರೀ ಹೆಚ್. ಎಂ. ಚನ್ನಬಸಪ್ಪ.—ಮಾನ್ಯ ಮುಖ್ಯಮಂತ್ರಿಗಳು ಹೇಳುವುದನ್ನು ಈಗ ಒಪ್ಪಿ ಕೊಳ್ಳೋಣ. ಯಾರಿಗೆ ನಸ್ಜೇನಲಿಟಿ ಅಥವಾ ಕೆಪ್ಯಾಸಿಟಿ ಇದೆಯೋ ಅಂತವರು ಫೀಜುಗಳನ್ನು ಕೊಡಲಿ. ಯಾರಿಗೆ ನಸ್ಜೇನಬಲಿಟಿ ಇಲ್ಲವೋ ಅಂತಹವರಿಗೆ ಸರಕಾರ ಸಹಾಯ ಮಾಡುವುದು ಯೋಗ್ಯ. ಇದನ್ನು ಯಾವ ರೀತಿ ನಿರ್ಧಾರ ಮಾಡಬೇಕು ಎನ್ನುವುದಕ್ಕೆ ತಮ್ಮ ಸಲಹೆಗಳನ್ನು ಸರ್ಕಾರಕ್ಕೆ ಕೊಡಿ. ಆಗ ಅದನ್ನು ವಿಚಾರ ಮಾಡಬಹುದು.

ಶ್ರೀ ಹೆಚ್. ಡಿ. ದೇವೇಗೌಡ.—ನಾನು ಇದರ ಬಗ್ಗೆ ಹೇಳುವುದೇನಿಲ್ಲ. ನಿಮ್ಮ ಪಕ್ಷದ ಸದಸ್ಯರುಗಳೇ ಸಲಹೆ ಕೊಟ್ಟಿರುವಂತೆ ಸರ್ಕಾರದ ಹುಕುಂ ತನ್ನಿ, ನಮ್ಮ ಮುಖ್ಯ ಮಂತ್ರಿಗಳನ್ನು ಶ್ರೀಮಂತರ ಹತ್ತಿರ ಹೋಗಿ ಅಂಗಲಾಚಿ ಬೇಡಿ ತರಬೇಕೆಂದಲ್ಲ. ಇಲ್ಲವೇ ದೇಣಿ ಎಂದು ಇತರರನ್ನು ಬೇಡಬೇಕು ಎನ್ನುವ ವಾದ ಬೇಡ. ತಾವು ಇಲ್ಲ 500 ರೂಪಾಯಿಗಳವರೆಗೆ ಪರಿಮಿತಿ ಎಂದು ಮಾಡಿದ್ದೀರಿ ಎಂದರೆ ವರ್ಷಕ್ಕೆ ಆರುಸಾವಿರ ರೂಪಾಯಿಗಳ ವರಮಾನ ಎಂದಾಗುತ್ತದೆ. ಇದನ್ನು ಯಾವ ಏರಿಯಾದಲ್ಲಿ ಯಾವ ಆಧಾರದಮೇಲೆ ಪರಿಗಣಿಸುತ್ತೀರಿ, ಗ್ರಾಮಾಂತರ ಪ್ರದೇಶಗಳಿಂದ ಬರುವವರ ಬಗ್ಗೆ ಇದು ಅನ್ವಯವಾಗುವುದಿಲ್ಲ.

ಶ್ರೀ ಹೆಚ್. ಎಂ. ಚನ್ನಬಸಪ್ಪ.—ಒಬ್ಬರು ಡೆಪ್ಯುಟಿ ಕಮಿಷನರು ಇರುತ್ತಾರೆ, ಒಬ್ಬರು ಎಕ್ಸಿಕ್ಯೂಟೀವ್ ಇಂಜನೀಯರು ಇರುತ್ತಾರೆ, ಇಂತಹವರೆಲ್ಲರಿಗೂ ಎಕ್ಸೆಂಪ್ಷನ್ ಕೊಡೋಣವೇ ?

ಶ್ರೀ ಕಾಗೋಡು ತಿಮ್ಮಪ್ಪ.—ನಿಮ್ಮ ಮಂತ್ರಿ ಮಂಡಲದಲ್ಲಿರುವ ಮಂತ್ರಿಗಳಾದ ಶ್ರೀಮಾನ್ ಶಿವಣ್ಣನವರ ಅಣ್ಣಂದಿರು ಶ್ರೀಮಾನ್ ಲಕ್ಷ್ಮಣ್ ಎನ್ನುವವರಿಗೆ ಸುಮಾರು 15—20 ಎಕರೆಗಳಷ್ಟು ಭೂಮಿ ಇತ್ತು ಮತ್ತು ಸುಮಾರು ಏಳು ಸಾವಿರ ರೂಪಾಯಿಗಳಷ್ಟು ವರಮಾನ ಬರುತ್ತಿತ್ತು. ಇಂದು ಮಳೆಯಾಗದೆ ಬರಗಾಲವಂದಾಗಿ ಅವರ ಜಮೀನಿನಲ್ಲಿ ಒಂದು ಕಾಳೂ ಬೆಳೆದಿಲ್ಲ ಮತ್ತು ಅವರ ಮನೆಯಲ್ಲಿ ಒಂದು ಕಾಳು ಕೂಡ ಇಲ್ಲ. ಇಂತಹವರ ಬಗ್ಗೆ ಸರ್ಕಾರ ಏನು ಮಾಡಬೇಕು ?

ಶ್ರೀ ಡಿ. ದೇವರಾಜ ಅರಸ್.—ತಾವು ಹೇಳುವಂತೆ ಅಂತಹ ಕೆಲವು ಜನರೂ ಇರಬಹುದು. ಕೆಲವರಿಗೆ ಸ್ವಲ್ಪ ಸ್ವಲ್ಪ ನೀರು ಸಿಗುತ್ತಿದೆ ಅಂತಹ ನೀರಿನ ಸಹಾಯದಿಂದ ಬೆಳೆ ಮಾಡುತ್ತಿದ್ದಾರೆ. ನಾನು ಮೊದಲೇ ಹೇಳಿದಂತೆ ಯಾರಿಗೆ ನಸ್ಜೇನಬಲಿಟಿ ಇಲ್ಲವೋ ಅಂತಹವರಿಗೆ ಅವರ ಪರಿಸ್ಥಿತಿ ನೋಡಿ ಸರ್ಕಾರ ಪರಿಶೀಲನೆ ಮಾಡಬೇಕಾಗುತ್ತದೆ. ಅಂತಹವರಿಗೆ ಸ್ವಲ್ಪ ಸಹಾಯ ಮಾಡಬೇಕು ಎಂದು ಹೇಳಿದರೆ ಅದನ್ನು ನೋಡೋಣ. ಅಂತಹ ಕೇಸುಗಳನ್ನು ನನ್ನ ಗಮನಕ್ಕೆ ತನ್ನಿ.

ಶ್ರೀ ಎಚ್. ಡಿ. ದೇವೇ ಗೌಡ.—ರಾಜ್ಯ ಸಚಿವರು ಏನು ಹೇಳಿದ್ದಾರೆ ಅದನ್ನು ಮಾನ್ಯ ಮುಖ್ಯ ಮಂತ್ರಿಗಳು ವ್ಯಾಖ್ಯಾನ ಮಾಡಿದ್ದಾರೆ. ವಿದ್ಯಾರ್ಥಿಗಳಿಗೆ ಮಂತ್ರಿಗಳು ಬರೆದು ಕೊಟ್ಟಿರುವ ಕಾಗದದಲ್ಲಿ ಎಲ್ಲ ಫೀಯನ್ನೂ ಎಕ್ಸೆಂಪ್ಟ್ ಮಾಡುತ್ತೇವೆಂದು ಹೇಳಿದ್ದಾರೆ. ರಾಜ್ಯ ಸಚಿವರು ಹೇಳಿರುವ ವಿಚಾರವನ್ನು ಚರ್ಚೆ ಮಾಡಿ ಈ ರೀತಿಯ ನಿರ್ಣಯ ಮಾಡಿದ್ದೇವೆಂದು ಹೇಳುತ್ತಿದ್ದಾರೆ ಮಂತ್ರಿಗಳು ಬರೆದು ಕೊಟ್ಟಿರುವುದನ್ನು ಸಭೆಯ ಅವಗಾಹನೆಗಾಗಿ ಓದಿ ಹೇಳುತ್ತೇನೆ. ಅದು ಈ ರೀತಿಯಾಗಿದೆ :—

"The students have come enmasse to represent their grievances. The examination fee and second term fee also for the academic year 1972-73 is exempted."

ಅವರು ಹೇಳಿರುವುದನ್ನು ಮಾನ್ಯ ಮಾಡುವುದಕ್ಕೆ ಸರ್ಕಾರ ಸಿದ್ಧವಾಗಿದೆಯೇ ಇಲ್ಲವೇ ಎನ್ನುವುದನ್ನು ದಯವಾಡಿ ತಿಳಿಸಬೇಕು. ನಸ್ಟೇನಿಂಗ್ ಕೆಪ್ಯಾಸಿಟಿ ಇರುವವರನ್ನು ನೋಡಿಕೊಂಡು ಒಂದು ನಿರ್ಣಯ ಮಾಡಿರುವುದಾಗಿ ಹೇಳಿದ್ದಾರೆ. ಆದರೆ ರಾಜ್ಯ ಸಚಿವರು ಹೇಳಿರುವುದನ್ನು ಮಾನ್ಯ ಮಾಡುತ್ತಾರೆಯೇ ಎನ್ನುವುದರ ಬಗ್ಗೆ ನಮಗೆ ಆಶ್ವಾಸನೆ ಕೊಡಬೇಕು. ಮಾನ್ಯ ಮಾಡುವುದಿಲ್ಲವೆಂದು ಹೇಳುವುದಾದರೆ, ಆ ಬಗ್ಗೆ ನಾನು ಒತ್ತಾಯ ಮಾಡುವುದಿಲ್ಲ. ರಾಜ್ಯ ಸಚಿವರು ಮಂತ್ರಿಗಳಾಗಿ ಉಳಿಯಬೇಕೇ ಎನ್ನುವ ವಿಷಯದ ಬಗ್ಗೆ ನಾವು ಮಾತನಾಡಬೇಕಾಗುತ್ತದೆ.

Sri C. M. ARUMUGAM.—If a Minister makes a statement it is the joint responsibility of the Ministry to put it into action. The State Minister issued a statement very clearly that the Hyderabad area students are exempted from paying fees. I suggest that students coming from the urban areas whose parents' income is less than Rs. 500 may also be exempted from payment of fees. The Chief Minister has suggested that the students coming from the rural parts whose parents' income is less than Rs. 500 may be exempted from payment. Why not the same concession be extended to the Town and City students also?

Sri D. DEVARAJ URS.—We may consider this point. Do you want to please parents whose income is more than Rs. 6,000 and above. There must be some clear principles to be adopted in this respect. We cannot give the same concession to one and all. There might be some instances where a party having 20 acres of land may not be in a position to assist his boy or daughter to go to the College or School this year on account of drought conditions. We can find out such people and give assistance. I can understand such cases. But there are people who are having two or three wells and getting their lands irrigated and having some crops. They are better than others. Would you like them also to be exempted irrespective of their capacity? Some of them are capable of managing their boys and daughters in Schools and Colleges. Therefore I do not like such people to get that benefit. I am not going to help them.

Sri S. BANGARAPPA.—There is no doubt that even the rich people will come forward to get benefits if the Government is liberal.

ಶ್ರೀ ಎಸ್ ಬಂಗಾರಪ್ಪ.—ಸರ್ಕಾರದ ಹಣ ಕೊಡುತ್ತೇವೆ ಎನ್ನುವುದಾದರೆ ಶ್ರೀಮಂತ ಜನರೂ ಬಂದು ತೆಗೆದುಕೊಂಡು ಹೋಗುತ್ತಾರೆ.

ಶ್ರೀ ಡಿ. ದೇವರಾಜ ಅರಸ್.—ಅದಕ್ಕೆ ನಾನು ಎಲ್ಲೀಗೂ ರಿಯಾಯಿತಿ ಕೊಡುವುದು ಬೇಡ ಎಂದು ಹೇಳುತ್ತಿರುವುದು.

ಶ್ರೀ ಟಿ. ಎಂ. ಮಂಜುನಾಥ.—500 ರೂಪಾಯಿಗಿಂತ ಕಡಿಮೆ ವರಮಾನವಿರುವವರು ಇನ್‌ಕಂ ಸರ್ಟಿಫಿಕೇಟ್ ತರಬೇಕಾದರೆ ಫೀಸನ್ನು ಕೊಡುವುದಕ್ಕಿಂತ ಹೆಚ್ಚು ಖರ್ಚು ಮಾಡ ಬೇಕಾಗುತ್ತದೆ.

ಶ್ರೀ ಪಾಟೀಲ್ ನಾಗರಾಜ್.—ಫೀ ರಿಯಾಯಿತಿ ಕೊಡಬೇಕಾದರೆ ಆದಾಯ ಎಷ್ಟು ಇರಬೇಕು ಎನ್ನುವುದರ ಬಗ್ಗೆ ವಾದವಲ್ಲ. ಮಾನ್ಯ ಮಂತ್ರಿಗಳಾದ ಶಿವಣ್ಣನವರು ಏನು ಬರೆದು ಕೊಟ್ಟಿದ್ದಾರೆ ಅದರ ಬಗ್ಗೆ ಏನು ಹೇಳುತ್ತಾರೆ?

ಶ್ರೀ ಡಿ. ದೇವರಾಜ ಅರಸ್.—ಮಾನ್ಯ ವಿರೋಧ ಪಕ್ಷದ ನಾಯಕರು ಮಂತ್ರಿ ಶಿವಣ್ಣ ಅವರು ಏನು ಬರೆದು ಕೊಟ್ಟಿದ್ದಾರೆ ಎನ್ನುವ ವಿಚಾರದ ಬಗ್ಗೆ ಹಿಡಿದಿದ್ದಾರೆ. ಇದರಲ್ಲಿ ಹೈದರಾಬಾದ್ ಕರ್ನಾಟಕ ಎಂದು ಹೇಳಿದ್ದಾರೆ ಎಂದರೆ ಬಿದರೆ, ಗುಲ್ಬರ್ಗ ಮತ್ತು ರಾಯಚೂರು ಜಿಲ್ಲೆಗಳು ಈ ಭಾಗಕ್ಕೆ ಸೇರುತ್ತವೆ. ರಾಯಚೂರು ಜಿಲ್ಲೆಯನ್ನು ನಾವು ಏಕೆ ಗಣನೆಗೆ ತೆಗೆದುಕೊಳ್ಳಲಿಲ್ಲ ಎಂದರೆ, ಅಲ್ಲಿ ಎರಡು ಮೂರು ತಾಲ್ಲೂಕುಗಳಲ್ಲ ಮಾತ್ರ ಅಭಾವ ಪರಿಸ್ಥಿತಿ ಇರುತ್ತದೆ. ಆದ್ದರಿಂದ ಅದರ ಬಗ್ಗೆ ಆಲಾಯಿದಾ ಪರಿಶೀಲನೆ ಮಾಡೋಣ ಎಂದು ಇದ್ದೇವೆ. ಬಿಜಾಪುರ ಜಿಲ್ಲೆಯಲ್ಲಿ ಕೂಡ ಪರಿಸ್ಥಿತಿ ಏನಿದೆ ಎಂದು ಕೆಲವರು ಸದಸ್ಯರು ಹೇಳುತ್ತಿದ್ದಾರೆ. ಸರ್ಕಾರದ ಹಣ ಎಂದರೆ ನನ್ನ ಒಬ್ಬ ನದಲ್ಲ, ಅದು ಸಾರ್ವಜನಿಕರ ಹಣ. ಸಾರ್ವಜನಿಕವಾಗಿ ಇರತಕ್ಕ ಹಣವನ್ನು ಯಾವರೀತಿ

ಖರ್ಚು ಮಾಡಬೇಕು ಎನ್ನುವುದರಲ್ಲಿ ನಮಗಿರುವ ಜವಾಬ್ದಾರಿ ತಮಗೂ ಇದೆ ಎಂದು ನನಗೆ ನಂಬಿಕೆ ಇದೆ. ಹೀಗಿರಬೇಕಾದರೆ ವಿನಾಯಿತಿ ಕೊಡುವುದಕ್ಕೆ ನಕಾರಾರದ ಹಣವಿದೆ, ಎಲ್ಲವನ್ನು ಬಿಟ್ಟು ಬಿಡಿ ಎಂದರೆ ನಾಳೆ ಬಾವಿ ತೋಡಿಸುವುದಕ್ಕೆ ಹಣವನ್ನು ಎಲ್ಲಿಂದ ತರಬೇಕು ? ಹಾವನ್ನು ಹೊಡೆದು ಹದ್ದಿಗೆ ಹಾಕಿದರು ಎನ್ನುವಂತೆ ಆಗಬಾರದು. ನಮ್ಮಲ್ಲಿ ಒಂದು ಕೋಟಿ ರೂಪಾಯಿ ಹಣ ಉಳಿದರೆ ಅದರಿಂದ ಬೇರೆ ಜನರಿಗೆ ಕೆಲಸವನ್ನು ಒದಗಿಸುವುದಕ್ಕೆ ಸಹಾಯವಾಗುವುದಿಲ್ಲವೇ ! ವಿನಾ ಕಾರಣ ಯಾವ ಯಾವುದಕ್ಕೋ ಎಲ್ಲೆಲ್ಲ ಕೂಗಾಟ ಬರಲಿಲ್ಲ, ಕಲ್ಲೆಲ್ಲ ಮುದ್ದು ಕೂಡಿ ಎಂದು ಹೇಳುವುದಾದರೆ ಬಹುಶಃ ತಾವೂ ಒಪ್ಪಲಾರಿರಿ ಎಂದು ಸ್ಪಷ್ಟವಾಗಿ ನಾನು ಹೇಳಬೇಕಾಗುತ್ತದೆ.

ಶ್ರೀ ಶಿವಣ್ಣನವರು ಏನು ಹೇಳಿದ್ದಾರೆ, ಜನರಲ್ ಆಗಿ ಬಿಟ್ಟು ಬಿಡುತ್ತೇವೆಂದು ಹೇಳಿದ್ದಾರೆ. ಅವರ ಅಭಿಪ್ರಾಯಕ್ಕೆ ನಾವು ತೆಗೆದುಕೊಂಡಿರುವ ತೀರ್ಮಾನ ಬಹಳ ವಿರೋಧವಾಗಿದೆ ಎಂದು ಹೇಳಿದರು. ಅವರು ರಾಜ್ಯ ಸಚಿವರೇ ಆಗಿರಲಿ, ಸಚಿವರೇ ಆಗಿರಲಿ, Minister is a Minister ಅವರಿಗೂ ಜವಾಬ್ದಾರಿ ಇದೆ ಎಂದು ತಿಳಿದುಕೊಂಡು ಆ ಭಾಗದಲ್ಲಿರುವ ಪರಿಸ್ಥಿತಿಯನ್ನು ತಿಳಿದುಕೊಂಡು ಯೋಚನೆ ಮಾಡಿ ಒಂದು ತೀರ್ಮಾನ ತೆಗೆದುಕೊಂಡಿದ್ದೇವೆಂದು ಹೇಳಿದರೆ ಗುಹೆ ಮಾಡಿ ಏಕೆ ಹೇಳ ಬೇಕು ಎನ್ನುವುದು ಅರ್ಥವಾಗುವುದಿಲ್ಲ. ನಾವು ತೆಗೆದುಕೊಂಡಿರುವ ತೀರ್ಮಾನ ಯಾವ ರೀತಿಯಾಗಿ ಅವರು ಹೇಳಿದ್ದಕ್ಕೆ ತಾತ್ವಿಕವಾಗಿ ವಿರೋಧವಾಗಿದೆ ಎನ್ನುವುದನ್ನು ಶ್ರೀ ದೇವಾನ್ ದೇವೇಗೌಡರಾಗಲೀ, ಇನ್ನು ಯಾರೇ ಆಗಲೀ ಸ್ಪಷ್ಟಪಡಿಸಿಲ್ಲ. ಫೀಸ್ ಬಿಟ್ಟು ಬಿಡುತ್ತೇವೆಂದು ಹೇಳಿದ್ದಾರೆ. ಎಲ್ಲರಿಗೂ ಕೂಡ ಬಿಡಿ ಎನ್ನುವುದು ನಿಮ್ಮ ಪಾದಚರಿಯಾಗಿದೆ. ನಿಮಗೆ ಅರಿಕೆ ಮಾಡಿ ಮೊದಲೇ ನಾನು ಹೇಳಿದ್ದೇನೆ. ಅವರು ಹೇಳಿರುವುದಕ್ಕೂ, ನಾವು ತೀರ್ಮಾನ ತೆಗೆದುಕೊಂಡಿರುವುದಕ್ಕೂ ಯಾವರೀತಿಯ ವಿರೋಧವೂ ಇಲ್ಲ ಎಂದು ತಿಳಿಯುತ್ತೇನೆ.

5.30 P.M.

The order is as follows :

"The Hyderabad Karnatak area is hard hit by the acute scarcity condition. The students have come enmasse to represent their grievances. The examination fee and the 2nd term fees also for the academic year 1972-73 is exempted."

"ಅರ್" ಎಂತಲೂ ಇಲ್ಲ. "ಸಂ" ಎಂತಲೂ ಇಲ್ಲ.

I have been repeatedly saying that it is not an order at all.

Sri M. S. KRISHNAN.—The implication might also mean 'all'. You have correct it ಅಂಥ. We are prepared to accept.

ಶ್ರೀ ವಾಟಾಳ್ ನಾಗರಾಜ್.—ಮಾನ್ಯ ಮಂತ್ರಿಗಳು ಸಭೆಯಲ್ಲಿ ಇಲ್ಲದಿದ್ದರೆ ಆದು ಬೇರೆ ವಿಷಯ. ಅವರು ಸಭೆಯಲ್ಲಿ ಇಲ್ಲೇ ಇದ್ದಾರೆ. ಅವರು ಬರೆದು ಕೊಟ್ಟಿರುವುದು ಏನು ಎಂದು ಕೇಳಿ ಬಿಡಿ.

ಶ್ರೀ ಡಿ. ದೇವರಾಜ ಅರಸ್.—ಎಕ್ಸಮ್‌ಷನ್ ಕೋಡೋಣ ಅಂತಾ ಹೇಳಿದ್ದನ್ನು ಮಾನ್ಯ ಎಂ. ಎಸ್. ಕೃಷ್ಣನ್‌ನವರು ಚೆನ್ನಾಗಿ ವ್ಯಾಖ್ಯಾನ ಮಾಡಿದ್ದಾರೆ. ಆದು ಎಲ್ಲರಿಗೂ ಅನ್ವಯಿಸುತ್ತದೆಂದು ಅವರೇ ಇಂಟರ್‌ಪ್ರೆಟ್ ಮಾಡಿಕೊಳ್ಳುತ್ತಿದ್ದಾರೆ.

I have interpreted properly. He has tried to make distinction between 'all' and 'some'.

ಶ್ರೀ ಎಂ. ಎಸ್. ಕೃಷ್ಣನ್. "ಅರ್" ಮತ್ತು "ಸಂ" ಎನ್ನುವ ಬಗ್ಗೆ ಇಷ್ಟೊಂದು ಮುಖ್ಯ ಮಂತ್ರಿಗಳು ಈ ರೀತಿ ಹೇಳಿದರು, 500 ಮತ್ತು 500 ಕ್ಕಿಂತ ಜಾಸ್ತಿ ವರಮಾನ ಇರತಕ್ಕಂಥಾವರಿಗೂ ಕೂಡ ಇದರ ಬಗ್ಗೆ ಇಂಪ್ಲಿಮೆಂಟ್ ಮಾಡಬೇಕಾದರೆ ಕೆಲವು ರಿಯಲ್ ಪ್ರೊಸೀಜರಲ್ ಡಿಫಿಕಲ್ಟೀಸ್ ಬರುತ್ತೆ ಎಂದು ನಾನು ಹೇಳುವುದು ನಿಜವಾಗಿ ಕ್ಷಾಮ ಮತ್ತು ಬರಗಾಲವೂ ಇದ್ದ ಜಾಗಗಳಲ್ಲಿ ಕಡಿಮೆ ವರಮಾನ ಬರತಕ್ಕಂಥಾವರು ಕೆಲವರು ಇರಬಹುದು. ಅಂಥಾವರಿಗೆ ಎಕ್ಸಮ್‌ಷನ್ ಏತಕ್ಕೆ ಮಾಡಬಾರದು ?

Sri D. DEVARAJ URS.—There are so many such cases.

Sri M. S. KRISHNAN.—What I am saying is this. In the present circumstances, when there is scarcity, will it not cause procedural difficulties? You may issue an order that exemption is given in respect of persons whose income is below Rs. 500. But how to find out it is below Rs. 500? Ultimately people will suffer unfortunately. After all, I think the loss of revenues to the State, may not be so much; if it is not very much, why don't you be charitable and accept a board and charitable interpretation?

ಶ್ರೀ ಡಿ. ದೇವರಾಜ ಅರಸ್.—ನಿಮಗೆ ಆ ಕಷ್ಟ ಬಂದಾಗ We will consider it. Probably, ಈಗ ನಿಮಗೆ ಅಂಥಾ ಕಷ್ಟ ಕಾಣುತ್ತಾ ಇಲ್ಲ. ಈ ಪ್ರಿನ್ಸಿಪಲ್‌ನ್ನು ತಾವು ಒಪ್ಪಿ ಕೊಳ್ಳುತ್ತೀರಿ. ಹಾಗೆ ಇರುವಾಗ ವಿತಕ್ಕೆ ಇಷ್ಟು ಚರ್ಚೆ ಮಾಡುತ್ತೀರಿ ?

Sri C. M. ARUMUGAM.—Madam Speaker, Mr. Shivanna is not only a Member of the Cabinet, but he is also a Cabinet Minister in charge of the District for the relief works. Am I correct? You do not have a Cabinet Minister for Gulbarga. Though he is a Minister of State, he has been in charge of Gulbarga District and so, he should carry out his supervisory work. Mr. Shivanna has said that the Hyderabad Karnatak area is exempted from payment of fee. In what circumstances he has said it, it is better we hear it from him. The Chief Minister was saying there is no need to do that. But there is need to do it. I think he has done it keeping in view the incapacity of the students to pay the fees. In fact he has given the order after a thorough study and after receiving representation not only from Gulbarga but from various other places. He has visited places. Therefore, I would only request Mr. Sivanna to give his opinion under what circumstances he has given this order.

ಶ್ರೀ ಹೆಚ್. ಡಿ. ದೇವೇಗೌಡ.—ಮಾನ್ಯ ಸಚಿವರಾದ ಶ್ರೀ ಶಿವಣ್ಣನವರು ಕೊಟ್ಟಂಥಾ ಅರ್ಡರ್ ಏನು ಇದು, ಆದು ಆರ್ಡರ್ ಅಲ್ಲವೆಂದು ಮಾನ್ಯ ಮಂತ್ರಿಗಳು ಹೇಳಿದರು. ನಾನು ಇದರ ಬಗ್ಗೆ ಹೆಚ್ಚು ವ್ಯಾಖ್ಯಾನ ಮಾಡುವುದಿಲ್ಲ. ತಾವು "ಆರ್" ಮತ್ತು "ಸಂ" ಬಗ್ಗೆ ಚೆನ್ನಾಗಿ ವ್ಯಾಖ್ಯಾನ ಮಾಡಿದ್ದೀರಿ. ಮಾನ್ಯ ಮುಖ್ಯ ಮಂತ್ರಿಗಳು ಬಹಳ ಜಾಣ್ಮೆಯಿಂದ ಜಾರಿಕೊಳ್ಳುವ ಪ್ರಯತ್ನ ಮಾಡುತ್ತಿದ್ದಾರೆ. ಈವೊತ್ತು ಈ ಸಭೆಯಲ್ಲಿ ಶ್ರೀ ಶಿವಣ್ಣನವರು ಇದ್ದಾರೆ. ಶ್ರೀ ದೇವೇಂದ್ರಪ್ಪ ಘಾಳಪ್ಪ ಮತ್ತು ಶ್ರೀ ಶಿವಣ್ಣನವರನ್ನು ಗುಲ್ಬರ್ಗ ಮತ್ತು ಬೀದರ್ ಜಿಲ್ಲೆಯ ಕ್ಷಾಮ ಪರಿಸ್ಥಿತಿಯನ್ನು ನೋಡಿಕೊಳ್ಳತಕ್ಕಂಥಾ ಜವಾಬ್ದಾರಿಗೆ ಪೂರ್ಣ ಅಧಿಕಾರ ಕೊಟ್ಟಿದ್ದೇವೆ ಅಂತ ನಾನು ಪತ್ರಿಕೆಯಲ್ಲೂ ಕೂಡ ಓದಿದ್ದೇನೆ. ಅದರ ಕಟಿಂಗ್ ಬೇಕಾದರೆ ನನ್ನ ಹತ್ತಿರ ಇದೆ. ಅವರು ಇದರ ಬಗ್ಗೆ ನಿರ್ಣಯ ತಗೆದುಕೊಳ್ಳುವುದಕ್ಕೆ ಸರ್ಕಾರ ಪೂರ್ಣ ಅಧಿಕಾರ ಕೊಟ್ಟಿದೆ ಎಂದು ಈ ಪೊತ್ತು ತಾವೂ ಕೂಡ ಹೇಳಿದ್ದೀರಿ. ಈವೊತ್ತು ಆರ್ಡರ್ ಇಷ್ಯೂ ಮಾಡಿರುವುದೂ ಕೂಡ ಶ್ರೀ ಶಿವಣ್ಣನವರು ಕೊಟ್ಟಿರುವ ಹುಕುಂ ಮೇರೆ ಸರ್ಕಾರ ನಿರ್ಣಯ ತೆಗೆದುಕೊಂಡಿದೆ ಎಂದು ಹೇಳಿದ್ದೀರಿ. ಇದರ ಬಗ್ಗೆ ತಾವು ನಮಗೆ ಕ್ಲಾರಿಫಿಕೇಷನ್ ಹೇಳಬೇಕು. ಮಾನ್ಯ ಸಚಿವರು ಹುಕುಂ ಮಾಡಿರುವುದರಲ್ಲಿ 'ಆರ್" ಮತ್ತು "ಸಂ" ಅಂತ ಯಾವುದೂ ಇಲ್ಲ ಎಂದು ಹೇಳುತ್ತೀರಿ. ತಾವು ಈಗ ಆರ್ಡರ್ ಇಷ್ಯೂ ಮಾಡಿರುವುದರಲ್ಲಿ ಅವರ ವರಮಾನ 500 ರೂಪಾಯಿಗಿಂತ ಕಡಿಮೆ ಇರಬೇಕು ಎಂದು ಸಮರ್ಥನೆ ಮಾಡುತ್ತಿದ್ದೀರಿ. ಅದರಿಂದ ತಾವು ಯಾವ ಯಾವ ಹುದ್ದೆಗಳಿಗೆ ಕೊಡಬೇಕೆಂದಿದ್ದೀರೋ ತಿಳಿಸಿ. ಒಬ್ಬ ಮಂತ್ರಿ ಕೊಟ್ಟಿರತಕ್ಕಂಥ ಹುಕುಂ ಏನು ಇದೆ ಆದು ಹುಕುಂ ಆಲ್ಲ ಅಂತ ಹೇಳುವುದು ಕಷ್ಟವಾಗುತ್ತದೆ. ಅವರು ಈವೊತ್ತು ಈ ಸಭೆಯಲ್ಲಿ ಇಲ್ಲೇ ಇರುವುದರಿಂದ ಅವರು ಯಾವ ಸರ್ಕಮ್‌ಸ್ಟಾನ್ಸ್ ಮೇರೆ ಈ ಹುಕುಂ ಕೊಟ್ಟಿದ್ದಾರೆ ಎನ್ನುವುದನ್ನು ತಾವು ನನಗೆ ತಿಳಿಸಬೇಕು.

ಶ್ರೀ ಎಂ. ಎಸ್. ಕೃಷ್ಣನ್.—ಅಧ್ಯಕ್ಷರೇ, ನನ್ನ ಪಾಯಿಂಟ್ ಆಫ್ ಆರ್ಡರ್ ಏನೆಂದರೆ ಸಚಿವರಾದ ಶ್ರೀ ಶಿವಣ್ಣನವರು ಇದರ ಬಗ್ಗೆ ಆರ್ಡರ್ ಮಾಡಿದ್ದಾರೆ. ಅದು ಲಿಖಿತ ಮೂಲಕ ಇದೆ. ಇದರ ಬಗ್ಗೆ ಅನ್ಯ ಮುಖ್ಯ ಮಂತ್ರಿಗಳು ವ್ಯಾಖ್ಯಾನ ಮಾಡುತ್ತಿದ್ದಾರೆ, ನಾನು ಹೇಳುವುದು ಏನೆಂದರೆ ಆ ಮಂತ್ರಿಗಳು ಈ ಸಭೆಯಲ್ಲಿ ಇಲ್ಲಿದೇ ಹೋಗಿದ್ದರೆ ಅದು ಬೇರೆ ವಿಷಯ. ಆ ಮಂತ್ರಿಗಳು ನಮ್ಮ ಎದುರಿಗೇ ಇರುವಾಗ he ows a duty.

Whether the Minister who has given that letter, has no responsibility, has to be cleared. Does he not owe an explanation to this House? He is escaping that responsibility and the Chief Minister is covering up that responsibility. The Minister of State should stand up and say what he has got to say. Then we will judge what the Minister says is all right or what the Chief Minister says is all right.

ಮಾನ್ಯ ಸಭಾಧ್ಯಕ್ಷಣಿಯವರು.—ಗ್ರೌಂಟ್ ಹೆಸರಿನಲ್ಲಿ ಗೌರ್ನಮೆಂಟ್ ಆರ್ಡರ್ ಇಷ್ಯೂ ಆಗಬೇಕು. ನೀವು ಯಾತಕ್ಕೆ ಅದನ್ನು ಗೌರ್ನಮೆಂಟ್ ಆರ್ಡರ್ ಅಲ್ಲ ಎಂದು ಹೇಳಿ ಸತಾಯಿಸುತ್ತೀರಿ.

Sri D. DEVARAJ URS.—May I make another point very clear. Sri Deve Gowda knows about it. Still I do not know why he is arguing about it. Even though I make a statement it is not a statement it is not a Government Order. Let alone Sri Sivanna; even if the Chief Minister were to make that statement, it is only a promise, or an intention on the part of the Government. It has to go to Government. Then only it can become a Government Order.

Sri M. S. KRISHNAN.—Then is the Government admitting that it is an irresponsible statement by a responsible Minister?

ಶ್ರೀ ಎಚ್. ಡಿ. ದೇವೇಗೌಡ.—ಸಭಾ ನಾಯಕರ ಹೇಳಿಕೆ ಬಗ್ಗೆ ನಂಬಿಕೆ ಇದೆ. ಸಭೆಯನ್ನು ನಿಗದಿತ ಕಾಲಕ್ಕೆ ಮುಂಚೆ ಕಳೆದಕಾರಿ ಅಡ್ಜರ್ನ್ ಮಾಡುವ ಕಾಲದಲ್ಲಿ ದೇಶದಲ್ಲಿ ಬರಗಾಲ ಭೀಕರ ಸ್ಥಿತಿಗೆ ಬರುತ್ತಿದೆ ಆದ್ದರಿಂದ ಅಡ್ಜರ್ನ್ ಮಾಡುತ್ತಿದ್ದೇವೆಂದು ಹೇಳಿಕೆ ಮಾಡಿದ್ದೀರಿ. ಈ ಒಂದು ಸ್ಥಾನದಲ್ಲಿ ನಿಂತು ಹೇಳತಕ್ಕದ್ದು ಸರ್ಕಾರದ ಹಕ್ಕುಂ ಎಂದು ತಮ್ಮ ಗಮನಕ್ಕೆ ತರುವುದಕ್ಕೆ ಪ್ರಯತ್ನ ಮಾಡುತ್ತಿದ್ದೇನೆ. ಬರಗಾಲ ಸಂದರ್ಭದಲ್ಲಿ ಗೌರ್ನಮೆಂಟ್ ಆರ್ಡರಿಗಾಗಿ ವೇಯ್ಟ್ ಮಾಡಬೇಕಾಗಿಲ್ಲ ನಾನು ಏನು ಹೇಳುತ್ತೇನೆ ಅದು ಗೌರ್ನಮೆಂಟ್ ಆರ್ಡರ್ ಎಂದು ತಿಳಿದುಕೊಳ್ಳಬೇಕು, ಎಂದು ಹೇಳಿದಿರಿ. ಗೌರ್ನಮೆಂಟ್ ಆರ್ಡರ್ ಇಷ್ಯೂ ಮಾಡುವುದು ನಕೆಂದರೆ ಇರಬಹುದು. ಸರ್ಕಾರ ಏನು ಹೇಳುತ್ತದೆ ಅದನ್ನು ಅನುಷ್ಠಾನಕ್ಕೆ ತರುವುದಕ್ಕೆ. ಅವರ ಪಾಗ್ದಾನವನ್ನು ಕಾರ್ಯರೂಪಕ್ಕೆ ತರುವುದಕ್ಕೆ ತಾವು ಸಮರ್ಥರೇ ಅಲ್ಲವೇ ಹೇಳಿ. ಫ್ರೀ ಎಕ್ಷಮ್ಪನ್ ಕೊಟ್ಟಿಲ್ಲ. ಅದರ ಹೊಣೆಗಾರಿಕೆ ತಾವು ಹೊರಬೇಕಾಗುತ್ತದೆ. ಸ್ಟೇಟ್ ಫೈನಾನ್ಸ್ ಮಿನಿಸ್ಟರ್ ಕೊಡತಕ್ಕ ಪಾಗ್ದಾನವನ್ನು ಕಾರ್ಯರೂಪಕ್ಕೆ ತರುವುದಕ್ಕೆ ತಾವು ಏಮರ್ಕೆಮಾಡಬೇಕು. ತಾವು ಸ್ಟೇಟ್‌ಮೆಂಟ್ ಕೊಡತಕ್ಕ ಕಾಲದಲ್ಲಿ 21 ಜನ ಪೋಲೀಸ್ ಅಧಿಕಾರಿಗಳಿಗೆ ಎಟಾಗಿದೆ ಮಕ್ಕೆ 21 ಜನರ ಮೇಲೆ ಕೇಸ್ ರಿಜಿಸ್ಟರ್ ಮಾಡಿದೆ. ಸರ್ಕಾರಿ ಪ್ರಾಪರ್ಟಿ ಲಾಸ್ ಆಗಿದೆ ಎಂದು ಹೇಳಿದ್ದೀರಿ, ಸರ್ಕಾರಿ ಪ್ರಾಪರ್ಟಿ ಯಾವುಯಾವುದು ಲಾಸ್ ಆಗಿದೆ? ನಾಳೆ ಇದರ ಬಗ್ಗೆ ಮತ್ತೆ ವಿವರಣೆ ಕೊಡುತ್ತೀರಾ? ಲೈಟು ಹೊಡೆದು ಹಾಕಿದ್ದಾರೆ, ಹಾಸ್ಪಿಟಲ್‌ನಲ್ಲಿ ಎಷ್ಟು ಜನ ಪೋಲೀಸ್ ಕಾನ್ಸ್‌ಟೇಬಲ್ಸ್ ಅಡ್ಮಿಟ್ ಆಗಿದ್ದಾರೆ?

ಶ್ರೀ ಬಾಪುಗೌಡ ರಾಯಪ್ಪ.—ಹಾಸ್ಪಿಟಲ್‌ನಲ್ಲಿ ಎಷ್ಟು ಜನ ಕಾನ್ಸ್‌ಟೇಬಲ್ಸ್ ಅಡ್ಮಿಟ್ ಆಗಿದ್ದಾರೆ?

ಶ್ರೀ ಎಚ್. ಡಿ. ದೇವೇಗೌಡ.—ಎಷ್ಟು ಪಬ್ಲಿಕ್ ಪ್ರಾಪರ್ಟಿ ಯಾವುಯಾವುದಕ್ಕೆ ಡ್ಯಾಮೇಜ್ ಆಗಿದೆ? ಪೋಲೀಸ್ ಅಕ್ಷನ್ ಸಮರ್ಥನೆ ಮಾಡುವ ಕಾಲದಲ್ಲಿ ಪೋಲೀಸ್ ರಕ್ಷಣೆ ಕೇಳಬೇಕಾಗು

(ಶ್ರೀ ಹೆಚ್. ಡಿ. ದೇವೇಗೌಡ)

ತ್ತದೆ. ಪೋಲೀಸ್ ರಕ್ಷಣೆ ಬೇಡ ಎಂದು ಯಾರು ವಾದಮಾಡುವುದಕ್ಕೆ ಆಗುವುದಿಲ್ಲ. ತಾವು ಈ ಕಡೆ ಇದ್ದಾಗ ಸ್ಟುಡೆಂಟ್ಸ್ ಎಕ್ಸೆಸ್ ಮೇಲೆ ಎರಡೂವರೆ, ಮೂರುದಿವಸಗಳು, ಶ್ರೀಮಾನ್ ಚೆನ್ನಬಸಪ್ಪನವರು ಕೂಡ ಆರ್ಗ್ಯೂ ಮಾಡಿರುವುದನ್ನು ಬೇಕಾದರೆ ಓದಬಹುದು. ಶ್ರೀಮಾನ್ ಸಿದ್ದೇಗೌಡರಪ್ಪನವರು ಎಕ್ಸ್‌ಪೋ 70 ಮೇಲೆ ಭಾಷಣ ಮಾಡಿದ್ದಾರೆ.

ಶ್ರೀ ಪಾಟೀಲ್ ನಾಗರಾಜ್.—ಈಗ ಹೊಸ ಕಂಪನಿ ಪ್ರಾರಂಭಮಾಡಿದ್ದಾರೆ. ಹಳೆಯ ಕಂಪನಿಯ ಹೇಳಿಕೆ ಶ್ರೀಮಾನ್ ದೇವೇಗೌಡರು ತಿಳಿಸುತ್ತಿದ್ದಾರೆ.

ಶ್ರೀ ಎಚ್. ಡಿ. ದೇವೇಗೌಡ.—ಇವೊತ್ತು ಗುಲ್ಬರ್ಗದಲ್ಲಿ ಹುಡುಗರು ಫೀಸ್ ವಜಾ ಮಾಡಬೇಕೆಂದು ಅಜಿಟೇಷನ್ ಮಾಡುತ್ತಾ ಇದ್ದಾರೆ. ಮತ್ತು ಅವರು ಶಾಂತರೀತಿಯಿಂದ ವರ್ತನೆ ಮಾಡುತ್ತಿದ್ದಾರೆ. ಶ್ರೀಮಾನ್ ಶಿವಣ್ಣನವರು ಹೋದ ದಿವಸ ಅವರಿಗೆ ಹೇರಾವ್ ಮಾಡಿರಬಹುದು, ಆದರೆ ಪಬ್ಲಿಕ್ ಪ್ರಾಪರ್ಟಿ ಅಥವಾ ಶಿವಣ್ಣನವರ ಕಾರಿಗೆ ಜಖಂ ಮಾಡಿದ್ದಾರೆ ಎಂದು ಹೇಳಲಿಲ್ಲ. ಅವರ ಅಜಿಟೇಷನ್ ಶಾಂತರೂಪದಿಂದ ನಡೆಸಿಕೊಂಡು ಹೋಗಿದ್ದಾರೆ. ಯಾವಾಗ ಸಮಸ್ಯೆ ಉದ್ಭವ ಆಗಿದೆಯೆಂದರೆ ಹಣಕಾಸಿನ ರಾಜ್ಯ ಸಚಿವರು ಕೊಟ್ಟ ಆಶ್ವಾಸನೆಯನ್ನು ತಾವು ಪರಿಶೀಲನೆ ಮಾಡಬೇಕಾಗುತ್ತದೆ ಎಂದು ಹೇಳಿದ್ದು ಪತ್ರಿಕೆಯಲ್ಲಿ ವರದಿಯಾದಮೇಲೆ. ಶ್ರೀಮಾನ್ ಕೆ. ಎಚ್. ಪಾಟೀಲರು ಇದ್ದಾರೆ, ಅವರು ಏವಾನ್‌ಪಾಸಿ ಗೆಸ್ಟ್‌ಹೌಸ್‌ಗೆ ಹೋದಮೇಲೆ ಹನ್ನೆರಡೂವರೆ ಗಂಟೆಗೆ ಲಾಟಚಾರ್ಜ್ ಆಗಿದೆ. ಸ್ಟೂಡೆಂಟ್ಸ್ ಶ್ರೀಮಾನ್ ಕೆ. ಎಚ್. ಪಾಟೀಲರ ಹತ್ತಿರಹೋಗಿ ಅವರನ್ನು ಮಿಟ್‌ಮಾಡಿ ಮುಖ್ಯಮಂತ್ರಿಗಳು ಹೇಳಿದ್ದು ಸ್ಟೇಟ್‌ಮೆಂಟ್ ಪತ್ರಿಕೆಯಲ್ಲಿ ವರದಿಯಾಗಿದೆ, ಶ್ರೀಮಾನ್ ಶಿವಣ್ಣನವರು ಹುಕುಂ ಮಾಡಿ ಆಶ್ವಾಸನೆ ಕೊಟ್ಟು ಹೋದರು ಅದನ್ನು ದಯಾಮಾಡಿ ತಾವು ಕ್ಲಾರಿಫೈ ಮಾಡಿ ಎಂದು ಕೇಳಿದರು. ಆ ರೀತಿ ಕೆ. ಎಚ್. ಪಾಟೀಲರನ್ನು ಕೇಳಿ ಆದಮೇಲೆ ಲಾಟಚಾರ್ಜ್ ಆಗಿದೆ. ಲಾಟಚಾರ್ಜ್ ಹನ್ನೆರಡೂ ಇಪ್ಪತ್ತೈದು. ತಾವು ಕೊಟ್ಟಂತಹ ಹೇಳಿಕೆಗೂ ತಮ್ಮ ಸಚಿವ ಸಂಪುಟದ ಸದಸ್ಯರು ಕೊಟ್ಟಿರುವ ಹೇಳಿಕೆಗೂ ವ್ಯತ್ಯಾಸ ವಿರುವುದರಿಂದ ಈ ಘಟನೆ ನಡೆದಿರುವುದು. ಪಬ್ಲಿಕ್ ಪ್ರಾಪರ್ಟಿ ಡ್ಯಾಮೇಜ್ ಆಗಿದೆ, ಪೋಲೀಸ್ ವ್ಯಾನಿಗೆ ಕಲ್ಲುಬಿದ್ದಿದೆ ಎಂದು ನೆಪಮಾಡಿದ್ದಾರೆ. ಕಲ್ಲು ಬಿದ್ದಿದೆಯೋ ಇಲ್ಲವೋ ಪ್ರಾಮಾಣಿಕವಾಗಿ ಇಲ್ಲಿ ಕೂತು ಅಲ್ಲಿ ನಡೆದ ಘಟನೆ ಬಗ್ಗೆ ವಿಮರ್ಶೆಮಾಡುವುದಕ್ಕಾಗುವುದಿಲ್ಲ. ಪತ್ರಿಕೆಯಲ್ಲಿ ಪಬ್ಲಿಕ್ ಪ್ರಾಪರ್ಟಿ ಡ್ಯಾಮೇಜ್ ಮಾಡುವುದಕ್ಕಾಗಲಿ ಹಿಂಸಾಕೃತ್ಯ ಮಾಡುವುದಕ್ಕಾಗಲಿ ಮಕ್ಕಳು ಕೈಹಾಕಿಲ್ಲ. ಆದರೆ ಪೋಲೀಸರು ಇಂಥ ಸನ್ನಿವೇಶದಲ್ಲಿ ಎಕ್ಸೆಸ್ಸಿವ್ ಆಗಿ ವರ್ತನೆ ಮಾಡಿದ್ದಾರೆಂದು ಪತ್ರಿಕೆಯಲ್ಲಿ ವರದಿಯಾಗಿರುವುದು ಓದಿದ್ದೇನೆ. ಪಬ್ಲಿಕ್ ಪ್ರಾಪರ್ಟಿ ಏನೇನು ಡ್ಯಾಮೇಜ್ ಆಗಿದೆಯೆಂದು ಹೇಳಬೇಕು, ಎಷ್ಟುಜನ ಪೋಲೀಸರಿಗೆ ಏಟುಬಿದ್ದಿದೆ, ಎಷ್ಟುಜನ ಏಟುಬಿದ್ದು ಹಾಸ್ಪಿಟಲ್‌ನಲ್ಲಿ ಟ್ರೀಟ್‌ಮೆಂಟ್ ತೆಗೆದುಕೊಂಡಿದ್ದಾರೆ ಹೇಳಬೇಕು. ಎಷ್ಟುಜನ ಮಕ್ಕಳಿಗೆ ಏಟುಬಿದ್ದಿದೆ ವರದಿ ಕೊಡಬೇಕು. ನಾಳೆ ಫರ್‌ದರ್ ಇನ್‌ಫರ್‌ಮೇಷನ್ ಕೊಡುವಾಗ ಈ ವಿಷಯವನ್ನು ಕಲೆಕ್ಟ್‌ಮಾಡಿ ನಭೆಗೆ ಕೊಡಬೇಕು. ಮಾನ್ಯ ಮುಖ್ಯಮಂತ್ರಿಗಳು ಹೇಳಿರುವುದನ್ನು ಜ್ಞಾಪಕಕ್ಕೆ ತಂದುಕೊಟ್ಟೆ. ನಾನು ಏನು ಹೇಳುತ್ತಿದ್ದೇನೆ ಅದು ಹುಕುಂ ಎಂದು ಸರ್ಕಾರದ ಅರ್ಡರ್‌ಗೋನ್ಸರ ಕಾಯಬೇಕಾಗಿಲ್ಲ ಎಂದು ಈ ನಭೆಯಲ್ಲಿ ಹೇಳಿದ್ದಾರೆ ತಾವು ಏನು ನಿರ್ಣಯಮಾಡಿದ್ದೀರಿ ಅದು ಇಬ್ಬರು ಮಂತ್ರಿಗಳು ಗುಲ್ಬರ್ಗ ಜಿಲ್ಲೆಯ ಒಗ್ಗೆ ಏನು ಕಾರ್ಯಕ್ರಮ ತೆಗೆದುಕೊಂಡರು, ಯಾವ ಜವಾಬ್ದಾರಿ ನಿರ್ವಹಿಸಿದರು ಮಂತ್ರಿಗಳ ಹುಕುಂ ಜಾರಿಗೆ ಕೊಡುತ್ತೀವೆ ಎಂದು ಹೇಳಿಲ್ಲವೆ ?

ಶ್ರೀ ಕಾಗೋಡು ತಿಮ್ಮಪ್ಪ.—ಈಗ ಸಾಕಷ್ಟು ಚರ್ಚೆಯಾಗಿದೆ. ಶುಲ್ಕದ ವಿಷಯದಲ್ಲಿ ಪುನರ್‌ಪರಿಶೀಲನೆ ಮಾಡಬೇಕು. ಆ ಭಾಗದ ಶಾಸನಸಭಾ ಸದಸ್ಯರನ್ನು ಸೇರಿಸಿಕೊಂಡು ತಾವು ಅವರು ಅದರಿಂದ ಹೆಚ್ಚು ಪ್ರಯೋಜನವಾಗಿಲ್ಲ ಎಂದು ಅಭಿಪ್ರಾಯ ಕೊಟ್ಟರೆ ದಯವಿಟ್ಟು ಅದನ್ನು ಗಮನಕ್ಕೆ ತೆಗೆದುಕೊಂಡು ಪುನರ್‌ಪರಿಶೀಲನೆ ಮಾಡುವುದಕ್ಕೆ ಮನಸ್ಸುಮಾಡಬೇಕು. ಗ್ರಾಮಾಂತರ ಪ್ರದೇಶಗಳಲ್ಲಿ ಅನುಕೂಲಸ್ಥ ಮತ್ತು ಅನಾನುಕೂಲಸ್ಥರ ಪ್ರಶ್ನೆಯಿಲ್ಲ, ಅಲ್ಲಿ ಅತ್ಯಂತ ಕಠಿಣ ಪರಿಸ್ಥಿತಿ ಇದೆ. ಒಬ್ಬಬ್ಬ ಅನುಕೂಲಸ್ಥರು ಒಂದು ಊರಿನಲ್ಲಿ ಇರಬಹುದು. ಅಂತಹವರಿಗೆ ಕೊಡುವುದು ಬೇಡ. ಆದುದರಿಂದ ಇದನ್ನು ಪುನರ್‌ಪರಿಶೀಲನೆ ಮಾಡುವುದಕ್ಕೆ ದಯವಿಟ್ಟು ಅವಕಾಶ ಮಾಡಿಕೊಡಬೇಕು.

ಶ್ರೀ ಪಾಟೀಲ್ ನಾಗರಾಜ್.—ಮುಖ್ಯಮಂತ್ರಿಗಳ ಹೇಳಿಕೆ ಬಿಟ್ಟು, ಮಿಕ್ಕ ಯಾವ ಮಂತ್ರಿಗಳ ಹೇಳಿಕೆಗಳನ್ನು ಒಪ್ಪಬಾರದು. ಅವರು ಏನು ಸ್ಟೇಟ್‌ಮೆಂಟ್ ಯಾವ ಊರಿನಲ್ಲಿ, ಯಾವ

ಟಿ.ಬಿ. ಯಲ್ಲಿ ಕೊಟ್ಟರೂ ಅದನ್ನು ನಾವು ಒಪ್ಪಬಾರದು, ಮುಖ್ಯಮಂತ್ರಿಗಳು ಹೇಳುವುದೇ ವೇದ ವಾಕ್ಯ ಮಿಕ್ಕ ಮಂತ್ರಿಗಳು ಹೇಳುವುದು ಯಾವುದು ನಿಯಲ್ಲ ಎಂದು ಹೇಳುತ್ತಿದ್ದೇನೆ.

ಶ್ರೀ ಎಂ. ಎಸ್. ಕೃಷ್ಣನ್.—ಶ್ರೀ ಕಾಗೋಡು ತಿಮ್ಮಪ್ಪನವರ ಜೊತೆಯಲ್ಲಿ ನನ್ನ ಇನ್ನೊಂದು ಮನವಿ. ಅವರು ಕೇಸ್‌ಗಳ ಬಗ್ಗೆ ಮಾತನಾಡಿದರು. ಕೇಸ್ ಹಾಕಿದ್ದೀರಿ, ಇಂತಹ ಸಿಚ್ಯುಯೇಷನ್ ಬಂದಮೇಲೆ ಕೇಸ್ ಹಾಕುತ್ತೀರಿ. ಪರಿಸ್ಥಿತಿ ಉತ್ತಮಗೊಂಡಮೇಲೆ ಕೇಸುಗಳನ್ನು ವಾಪಸ್ ತೆಗೆದುಕೊಳ್ಳಬೇಕು.

ಶ್ರೀ ಡಿ. ದೇವರಾಜ ಅರಸ್.—ಮಾನ್ಯ ಸದಸ್ಯರ ಈ ಡಿಮ್ಯಾಂಡು ನದಾ ಇದ್ದೇ ಇದೆ. ಎಲ್ಲೇ ಕೇಸುಗಳನ್ನು ಹಾಕಲಿ, ಏನೇ ಗಲಾಟೆ ಮಾಡಿದರೂ ಅಂಥ ಕೇಸುಗಳನ್ನು, ಕೂಡಲೆ ವಾಪಸ್ ತೆಗೆದುಕೊಳ್ಳಬೇಕು ಎನ್ನುವುದು ಮಾನ್ಯ ಸದಸ್ಯರ ಸ್ಟ್ಯಾಂಡಿಗ್ ರಿಕ್ವೆಸ್ಟ್.

ಶ್ರೀ ಎಂ. ಎಸ್. ಕೃಷ್ಣನ್.—ತಮಿಳುನಾಡಿನಲ್ಲೂ ದೊಡ್ಡ ಎಜಿಟೇಷನ್ ನಡೆಯಿತು. ನಮ್ಮ ಪಕ್ಷದ ಸಹಸ್ರಾರು ಜನ ಜೈಲಿಗೆ ಹೋದರು. ಅಲ್ಲೂ ಕೂಡ ಗಲಭೆ, ಘರ್ಷಣೆ ನಡೆಯಿತು. ತಮಿಳುನಾಡಿನಲ್ಲಿ ಈ ಪ್ರಶ್ನೆ ಇತ್ಯರ್ಥ ಅದಮೇಲೆ ಅವರನ್ನೆಲ್ಲಾ ರಿಲೀಜ್ ಮಾಡಿದರು. ಕೇಸುಗಳನ್ನು ವಾಪಸ್ ತೆಗೆದುಕೊಂಡರು. ಉತ್ತರ ಪ್ರದೇಶದಲ್ಲಿ ನಡೆಯಿತು, ಮಹಾರಾಷ್ಟ್ರದಲ್ಲಿ ನಡೆದಿದೆ, ಪ್ಯೂನೂರಿನಲ್ಲಿ ಏತಕ್ಕೆ ನಡೆಯಬಾರದು ?

ಶ್ರೀ ಡಿ. ದೇವರಾಜ ಅರಸ್.—ಅದನ್ನು ಆಲೋಚನೆ ಮಾಡುತ್ತೇವೆ.

Sri D. DEVARAJ URS.—He has given a suggestion. We will see.

Sri H. S. SIDDAPPA.—'Minister' means, a Minister and Deputy Minister. A Minister of State has not been contemplated here, and according to the strict wording of the Rule, it does not include a 'State Minister'. I would like to know whether under our Rules of Procedure, whether the Minister of State is also a Minister.

MADAM SPEAKER—He is also a Minister.

ಶ್ರೀ ಡಿ. ದೇವರಾಜ ಅರಸ್.—ಮಾನ್ಯ ದೇವೇಗೌಡರು ಹೇಳುವುದಕ್ಕೆ ಮುಂಚೆಯೇ ಹೇಳಿದೆ. ಎನು ಹೇಳಿದ್ದಾರೆ. ಎನ್ನುವುದನ್ನು ಗಮನಕ್ಕೆ ತೆಗೆದುಕೊಂಡು ತಕ್ಷಣ ಕ್ಯಾಬಿನೆಟ್‌ನಲ್ಲಿ ಕುಳಿತು ಅದನ್ನು ಪರ್ಯಾಲೋಚನೆ ಮಾಡಿದೆವು. I have already said—that is a Cabinet decision. When once a decision is taken by the Cabinet, it is final, whether a Minister or Minister of State has said anything about it. It is the decision of the Government to which he is also a party ನಾನು ಬೇರೆ ಹೇಳುತ್ತೇನೆ. ಅವರು ಬೇರೆ ಹೇಳುತ್ತಾರೆ ಎನ್ನುವ ಪ್ರಶ್ನೆ ಏಳುವುದಿಲ್ಲ. ಮಿನಿಸ್ಟರು ಜವಾಬ್ದಾರಿಯಿಂದ ಹೇಳಿದ್ದಾರೆ ಎಂದು ತಿಳಿದು ಆರ್ಡರ್ ಮಾಡಿರತಕ್ಕದ್ದು. ಅದನ್ನು ಯಾವ ರೀತಿಯಾಗಿ ಉಲ್ಲಂಘನೆ ಮಾಡಿದ್ದಾರೆ ಎಂದು ನೀವು ಏನು ವ್ಯಾಖ್ಯಾನ ಮಾಡಿಕೊಂಡರೂ ಜನ ಆ ಮಾತನ್ನು ಒಪ್ಪಬೇಕು. ನೀವು ಎಷ್ಟೇ ಕಷ್ಟ ಪಟ್ಟರೂ ಸರ್ಕಾರ ಏನು ಅಜ್ಞೆ ಮಾಡಿದೆ ಎನ್ನುವುದು ದೇಶಕ್ಕೆ ಗೊತ್ತಿದೆ. 22 ನೇ ತಾರೀಖು ಮಿನಿಸ್ಟರು ಹೇಳಿದ ಮೇರೆ, 25 ನೇ ತಾರೀಖು ಆರ್ಡರನ್ನು ಹೊರಡಿಸಿದ್ದು ಗೊತ್ತಿದೆ. ಅವರು ಹೇಳಿದಂಥ ಮಾತನ್ನು ಉಲ್ಲಂಘನೆ ಮಾಡಬೇಕು ಎನ್ನುವ ದೃಷ್ಟಿಯಿಂದ ಸರ್ಕಾರ ಆಜ್ಞೆ ಮಾಡಿಲ್ಲ ಎಂದು ಸ್ಪಷ್ಟವಾಗಿ ಹೇಳುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ.—ಮುಖ್ಯಮಂತ್ರಿಗಳು ಜನ ಒಪ್ಪತಕ್ಕಂಥ ವಿಷಯದ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಇಂಥ ಆರ್ಡರ್ ಅನ್ನು ಜನ ಒಪ್ಪಬೇಕೇ, ಅಥವಾ ನೀವು ಹೇಳಿದಂಥ ಆರ್ಡರ್ ಅನ್ನು ಜನ ಒಪ್ಪಬೇಕೇ ?

ಶ್ರೀ ಡಿ. ದೇವರಾಜ ಅರಸ್.—ನಿಮ್ಮದನ್ನು ಒಪ್ಪಿಕೊಳ್ಳಲಿ.

ಶ್ರೀ ಎಚ್. ಡಿ. ದೇವೇಗೌಡ.—ಈ ಆರ್ಡರ್ ಬಗ್ಗೆ ವಾಟಾಳ್ ನಾಗರಾಜ್ ಅವರು ಸ್ಪಷ್ಟೀಕರಣ ಮಾಡಿ, ಬೇರೆ ಮಂತ್ರಿಗಳು ಹೇಳತಕ್ಕದ್ದನ್ನು ಜನ ನಂಬಬೇಕೇ ಬೇಡವೇ ; ಮುಖ್ಯಮಂತ್ರಿಗಳ ಬಾಯಿಂದ ಬಂದಂಥಾದ್ದನ್ನು ಮಾತ್ರ ನಂಬಬೇಕೇ ಎನ್ನುವ ಬಗ್ಗೆ ಹೇಳಿದ್ದಾರೆ.

ಶ್ರೀ ಡಿ. ದೇವರಾಜ ಅರಸ್.—ಅವರು ಹೇಳಿದ್ದನ್ನು ನಂಬಬೇಕು.

Sri M. S. KRISHNAN.—Sir, the Minister of State referred to here is present in the House. Does he not own a duty and responsibility to make a statement in this Assembly?

ಶ್ರೀ ಎಚ್. ಡಿ. ದೇವೇಗೌಡ.—ಇವತ್ತು ದಯವಾಡಿ ಹುಕುಂ ಮಾಡಿ. ನಡೆವ ನಂಪ್ಪುಟದ ನಿರ್ಣಯವಾಗಿ ಸರ್ಕಾರವ ಅಜ್ಜೆ ರಿಲೀಸ್ ಆಗುವವರೆಗೂ ಮಂತ್ರಿಗಳು ಯಾರು ಏನು ಹೇಳಿದರೂ ಜನ ನಂಬಲಿಕ್ಕೆ ಸಾಧ್ಯವಿಲ್ಲ ಎಂದು ಸ್ಪಷ್ಟೀಕರಣ ಆಗಬೇಕು.

ಶ್ರೀ ಡಿ. ದೇವರಾಜ ಅರಸ್.—ಏನು ಹೇಳಬೇಕೋ ಹೇಳಿಕೊಳ್ಳಿ, ನಾನು ಹೇಳಿದ್ದು ಮುಗಿದುಹೋಯಿತು. I have nothing to add to what I have already said.

ಶ್ರೀ ಎಚ್. ಡಿ. ದೇವೇಗೌಡ.—ತಾವು ರೂಲಿಂಗ್ ಕೊಡುವುದಕ್ಕೆ ಮುಂಚೆ ಹುಕುಂ ಬಗ್ಗೆ ಸಂಬಂಧಪಟ್ಟ ಮಂತ್ರಿಗಳು ಹಾಜರಿರುವಾಗ ಅವರೇ ಹೇಳಬೇಕು.

ಅಧ್ಯಕ್ಷರು —ಮಾನ್ಯ ಲೀಡರ್ ಅವರು ಜವಾಬ್ದಾರಿ ತೆಗೆದುಕೊಂಡು ಹೇಳಿದ ಮೇಲೆ ಅವರು ಹೇಳುವುದು ಅನಾವಶ್ಯಕ.

ಶ್ರೀ ಎಚ್. ಡಿ. ದೇವೇಗೌಡ.—ಫೇಸ್ ಸೇವಿಂಗ್ ಪ್ರಶ್ನೆ ಬೇಡ. ಹುಕುಂ ಬಗ್ಗೆ ನಡೆವ ವಿವರಣೆ ಪಡೆಯಬೇಕು, ಇಲ್ಲದಿದ್ದರೆ ಈ ಸಭೆಯು ಕಾರ್ಯಕರಾಪಗಳನ್ನು ಮಾಡುವುದು ಕಷ್ಟವಾಗುತ್ತದೆ. ಇಂಥ ಪರಿಸ್ಥಿತಿಯಲ್ಲಿ ಕೆಲಸ ಮಾಡುವುದು ಸಾಧ್ಯವಾಗುವುದಿಲ್ಲ.

Sri H. M. CHANNABASAPPA.—The simple issue before the House is whether the adjournment motion has to be allowed or not. Now I request the Speaker to give a ruling on that.

ಶ್ರೀ ಎಚ್. ಡಿ. ದೇವೇಗೌಡ.—ನೀವು ರೂಲಿಂಗ್ ಕೊಟ್ಟಮೇಲೆ ವಾಕ್ ಔಟ್ ಮಾಡುವುದಿಲ್ಲ. ರೂಲಿಂಗ್ ಕೊಡುವುದಕ್ಕೆ ಮುಂಚೆ ಸರ್ಕಾರದ ನಿರ್ಣಯವನ್ನು ಪ್ರತಿಪಾದನೆ ಮಾಡತಕ್ಕ ಕಾಲದಲ್ಲಿ ಮಂತ್ರಿಗಳು ಹೇಳುವುದನ್ನು ಅನುಷ್ಠಾನಕ್ಕೆ ತರುವುದರಲ್ಲಿ ಲೋಪ ಮಾಡಿರುವುದರಿಂದ ಧಿಕ್ಕಾರ ಮಾಡಿ ಸಭಾತ್ಯಾಗ ಮಾಡುತ್ತೇವೆ.

At this stage, Sri H. D. Deve Gowda, Sri C. M. Arumugam, Sri Vatal Nagaraj and others withdrew from the House.

Madam SPEAKER.—I have withheld my consent to the adjournment motion.

The House stands adjourned to meet again tomorrow at One of the clock.

The House adjourned at Six of the Clock to meet again at One of the clock on Tuesday, the 28th November 1972.